

# ಸಿಹಿ ಕಹಿ

ಸಂಪಾದಕರು : ಮಾರುತಿ ಹೊಸಮನಿ

Editor : MARUTI BASAVANTAPPA HOSAMANI

Cell : +91 97413 19119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 | Issue : 192 | Tuesday 19-12-2023 | E-mail : maruti.b.hosamani76@gmail.com | Page: 4 | Price : Rs. 1/-


## ದಾವೂದ್‌ಗೆ ವಿಷ ಪ್ರಾಶನ: ಆಸ್ಪತ್ರೆಗೆ ದಾಖಲು



ಇಸ್ಲಾಮಾಬಾದ್ : ಭೂಗತ ಪಾತಕಿ 1993 ಮುಂಬೈ ಸರಣಿ ಸ್ಫೋಟದ ಪ್ರಮುಖ ಆರೋಪಿ ದಾವೂದ್ ಇಬ್ರಾಹಿಂ ಆರೋಗ್ಯ ತೀವ್ರ ಹದಗೆಟ್ಟಿದ್ದು, ಪಾಕಿಸ್ತಾನದ ಕರಾಚಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ದಾವೂದ್‌ಗೆ ವಿಷಪ್ರಾಶನ ಮಾಡಲಾಗಿದೆ ಎಂದು ಸಾಮಾಜಿಕ ಜಾತಾಣಗಳಲ್ಲಿ ಹರಿದಾಡುತ್ತಿದ್ದು, ಈ ಬಗ್ಗೆ ನಿಖರ ಮಾಹಿತಿ ಇನ್ನೂ ತಿಳಿದು ಬಂದಿಲ್ಲ. ಎರಡು ದಿನಗಳ ಹಿಂದೆ ದಾವೂದ್ ಆಸ್ಪತ್ರೆಗೆ ದಾಖಲಾಗಿದ್ದು, ಆಸ್ಪತ್ರೆಯ ಸುತ್ತ ಬಿಗಿಭದ್ರತೆ ಕೈಗೊಳ್ಳಲಾಗಿದೆ.

ಪಾಕಿಸ್ತಾನದ ಕೆಲವು ಮಾಧ್ಯಮಗಳ ವರದಿಗಳ ಪ್ರಕಾರ, ಭೂಗತ ಪಾತಕಿ ದಾವೂದ್‌ಗೆ ಅವನ ಹತ್ತಿರದವರೊಬ್ಬರು ವಿಷ ನೀಡಿದ್ದರಿಂದ ಅವರು ಅಸ್ವಸ್ಥರಾಗಿದ್ದರು ಎಂದು ಹೇಳಲಾಗಿದೆ.1993ರ ಮುಂಬೈ ಸರಣಿ ಸ್ಫೋಟ ಪ್ರಕರಣದ ಹೊಣೆ ಹೊತ್ತಿರುವ 65ರ ಹರೆಯದ ಭೂಗತ ಪಾತಕಿ, ಕಳೆದ ಹಲವಾರು ವರ್ಷಳಿಂದ ಪಾಕಿಸ್ತಾನದಲ್ಲಿ ತಲೆಮರೆಸಿಕೊಂಡಿದ್ದಾನೆ. ಆದರೂ ಪಾಕಿಸ್ತಾನ ತಮ್ಮಲ್ಲಿ ದಾವೂದ್ ಇಬ್ರಾಹಿಂ ಇಲ್ಲ, ಆತನಿಗೆ ಆಶ್ರಯ ನೀಡಿಲ್ಲ ಎಂದು ಸಬೂಬು ಹೇಳಿಕೊಂಡು ಮೊಂಡಾಟ ಪ್ರದರ್ಶಿಸುತ್ತಾ ಬಂದಿದೆ. ಆದರೆ ಈಗ ದಾವೂದ್ ವಿಷಪ್ರಾಶನದಿಂದ ಆಸ್ಪತ್ರೆಗೆ ದಾಖಲಾಗಿರುವುದು ಪಾಕಿಸ್ತಾನದ ನಿಜಬಣ್ಣ ಬಯಲಾಗಿದೆ.

ದಾವೂದ್ ಇಬ್ರಾಹಿಂ ಆರೋಗ್ಯ ಅವರ ಸ್ಥಿತಿ ಚಿಂತಾಜನಕವಾಗಿದೆ ಮತ್ತು ಪಾಕಿಸ್ತಾನಿ ಸಂಸ್ಥೆಯು ಆಸ್ಪತ್ರೆಯ ಸುತ್ತ ಭದ್ರತೆಯನ್ನು ಬಿಗಿಗೊಳಿಸಿದೆ ಎಂದು ಮೂಲಗಳು ತಿಳಿಸಿವೆ,

ಮುಂಬೈ ಸ್ಫೋಟದ ಮಾಸ್ಟರ್ ಮೈಂಡ್:

1993ರ ಮುಂಬೈ ಸ್ಫೋಟದ ಮಾಸ್ಟರ್ ಮೈಂಡ್ ಆಗಿರುವ ದಾವೂದ್ ಇಬ್ರಾಹಿಂ ದಶಕಗಳಿಂದ ಪಾಕಿಸ್ತಾನದಲ್ಲಿ ನೆಲೆಸಿದ್ದಾರೆ. ಇದನ್ನು ಜನವರಿಯಲ್ಲಿ ಅವರ ಸೋದರಳಿಯ ದೃಢಪಡಿಸಿದ್ದಾರೆ. ಭೂಗತ ಲೋಕದ ಡಾನ್ ಎರಡನೇ ಬಾರಿಗೆ ಮದುವೆಯಾದ ನಂತರ ಕರಾಚಿಯಲ್ಲಿ ಉಳಿದುಕೊಂಡಿದ್ದಾರೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆಗೆ ತಿಳಿಸಿದ್ದರು.

ದಾವೂದ್ ಇಬ್ರಾಹಿಂಗೆ ಪಾಕಿಸ್ತಾನದ ಪಠಾಣ್ ಎಂಬಲ್ಲಿ ಎರಡನೇ ಪತ್ನಿ ಇದ್ದಾರೆ. ಅವಳ ಹೆಸರು ಮೈಜಾಬಿನ್. ಅವರಿಗೆ ಮೂವರು ಪುತ್ರಿಯರಾದ ಮಾರುಖ್ (ಜಾವೇದ್ ಮಿಯಾಂದಾದ್ ಅವರ ಮಗ ಜುನೈದ್ ಅವರನ್ನು ವಿವಾಹವಾದರು), ಮೆಹ್ರಿನ್ (ವಿವಾಹಿತರು), ಮತ್ತು ಮಝಿಯಾ ಇನ್ನೂ ಮದುವೆಯಾಗಿಲ್ಲ ,ಮತ್ತು ಒಬ್ಬ ಮಗ ಮೋಹಿನ್ ನವಾಜ್ ಇದ್ದಾರೆ ಎಂದು ದಾವೂದ್ ಸಹೋದರಿ ಹಸೀನಾ ಪರ್ಕರ್ ಅವರ ಮಗ ಅಲಿಶಾ ಪರ್ಕರ್ ಹೇಳಿದ್ದಾರೆ.

ಹೇಳಿಕೆ ಆಧರಿಸಿ ಕಳೆದ ವರ್ಷ ನವೆಂಬರ್‌ನಲ್ಲಿ ಮುಂಬೈ ಸ್ಫೋಟ ಪ್ರಕರಣದಲ್ಲಿ ಎನ್‌ಐಎ ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿ ಈ ವಿಷಯ ತಿಳಿಸಿಸಲಾಗಿದೆ.

1993 ರ ಮುಂಬೈ ಸ್ಫೋಟದ ಮಾಸ್ಟರ್ ಮೈಂಡ್ ಆಗಿದ್ದು, 250 ಕ್ಕೂ ಹೆಚ್ಚು ಜನರ ಮಾರಣ ಹೋಮ ನಡೆದಿತ್ತು. ಸಾವಿರಾರು ಜನರು ಗಾಯಗೊಂಡಿದ್ದರು. ಅಂದಿನಿಂದ ದಾವೂದ್‌ನನ್ನು ಒಪ್ಪಿಸುವಂತೆ ಪಾಕಿಸ್ತಾನಕ್ಕೆ ಭಾರತ ಒತ್ತಡ ಹೇರಿದ್ದರೂ ಪಾಕ್ ಮೊಂಡಾಟ ಪ್ರದರ್ಶಿಸುತ್ತಾ ಬಂದಿದೆ.

ಡಿ-ಕಂಪನಿ ಮೇಲೆ ಏನೆಲ್ಲಾ ಆರೋಪಗಳಿವೆ

ಮಾದಕವಸ್ತು ಕಳ್ಳಸಾಗಣೆ, ಹಣ ವರ್ಗಾವಣೆ, ಸುಲಿಗೆ ಮತ್ತು ಶಸ್ತ್ರಾಸ್ತ್ರ ಕಳ್ಳಸಾಗಣೆಯಂತಹ ಹಲವಾರು ಇತರ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪಗಳಿವೆ.ಸಂಘಟಿತ ಅಪರಾಧ ಸಿಂಡಿಕೇಟ್ ಅನ್ನು 'ಡಿ-ಕಂಪನಿ' ಎಂದು ಕರೆಯುತ್ತಾರೆ. ಈತ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಮತ್ತು ಲಷ್ಕರ್-ಎ-ತೊಯ್ಬಾ ಉಗ್ರ ಸಂಘಟನೆಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಎನ್ನಲಾಗಿದೆ.ದಶಕಗಳಿಂದ, ಭಾರತ ದಾವೂದ್ ಇಬ್ರಾಹಿಂನನ್ನು ಪಾಕಿಸ್ತಾನದಿಂದ ಹಸ್ತಾಂತರಿಸಲು ಪ್ರಯತ್ನಿಸುತ್ತಿದೆ ಮತ್ತು ಆ ದೇಶದಲ್ಲಿ ಅವನ ಚಟುವಟಿಕೆಗಳ ಹಲವಾರು ಪುರಾವೆಗಳನ್ನು ಒದಗಿಸಿದೆ. ಆದಾಗ್ಯೂ, ಪಾಕಿಸ್ತಾನ ಪದೇ ಪದೇ ಅಪರಾಧಿಗೆ ಆಶ್ರಯ ನೀಡುವುದನ್ನು ನಿರಾಕರಿಸಿದೆ

# 60 ವರ್ಷ ಮೇಲ್ಪಟ್ಟವರಿಗೆ ಮಾಸ್ಕ್ ಕಡ್ಡಾಯ



ಬೆಂಗಳೂರು : ದೇಶದಲ್ಲಿ ಕೊರೊನಾ ಹೊಸ ರೂಪಾಂತರಿ ಪತ್ತೆಯಾಗಿರುವ ಬೆನ್ನಲ್ಲೆ ರಾಜ್ಯ ಸರ್ಕಾರ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದು, 60 ವರ್ಷ ಮೇಲ್ಪಟ್ಟವರಿಗೆ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿದೆ.

ಕೊಡಗು ಜಿಲ್ಲೆಯ ಕುಶಾನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಸಚಿವ ದಿನೇಶ್‌ಗುಂಡೂರಾವ್, 60ವರ್ಷ ಮೇಲ್ಪಟ್ಟವರಿಗೆ ಇಂದಿನಿಂದ ಮಾಸ್ಕ್ ಕಡ್ಡಾಯಗೊಳಿಸಲಾಗಿದೆ. ಈ ಬಗ್ಗೆ ಸುತ್ತೋಲೆ ಹೊರಡಿಸಲಾಗುವುದು ಎಂದರು.

ಕೊರೊನಾ ಹೊಸ ರೂಪಾಂತರಿ ಪತ್ತೆಯಾಗಿದೆ. ಯಾರೂ ಕೂಡಾ ಈ ಬಗ್ಗೆ ಆತಂಕಪಡುವ ಅಗತ್ಯವಿಲ್ಲ. ಆದರೂ 60 ವರ್ಷ ಮೇಲ್ಪಟ್ಟವರಿಗೆ ಮಾಸ್ಕ್ ಕಡ್ಡಾಯಗೊಳಿಸಲು ತೀರ್ಮಾನಿಸಿದ್ದೇವೆ. 60 ವರ್ಷ ಮೇಲ್ಪಟ್ಟವರಲ್ಲಿ ಕೆಲವರು ಹೃದಯ, ಮೂತ್ರಕೋಶ ಇತರೆ ಕಾಯಿಲೆಗಳಿಂದ ಬಳಲುತ್ತಿರುತ್ತಾರೆ. ಹಾಗಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಮಾಸ್ಕ್‌ನ್ನು ಹಾಕಿಕೊಳ್ಳುವಂತೆ ಇವರುಗಳಿಗೆ ಮನವಿ ಮಾಡಿದ್ದೇವೆ. ಹಾಗೆಯೇ ಇವರುಗಳು ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡಿ ಇಂದು ಆದೇಶ ಹೊರಡಿಸುತ್ತೇವೆ ಎಂದರು.

ಕೊರೊನಾ ರೂಪಾಂತರಿ ಪತ್ತೆಯಾದ ಬೆನ್ನಲ್ಲೆ ರಾಜ್ಯ ಸರ್ಕಾರ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ. ಅಧಿಕಾರಿಗಳ ಸಭೆ ನಡೆಸಿ ಏನೆಲ್ಲಾ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆಯೂ ಚರ್ಚೆ ಮಾಡಿದ್ದೇನೆ. ಕೇಂದ್ರ ಆರೋಗ್ಯ ಸಚಿವಾಲಯದ ಜತೆಯೂ ಸಂಪರ್ಕದಲ್ಲಿದ್ದೇವೆ ಎಂದರು.

ಕೇರಳ ಗಡಿ ಜಿಲ್ಲೆಗಳಾದ ಕೊಡಗು, ಮಂಗಳೂರು, ಚಾಮರಾಜನಗರ ಭಾಗದಲ್ಲಿ ಹೆಚ್ಚಿನ ನಿಗಾ ವಹಿಸಲಾಗಿದೆ. ಕೇರಳದಿಂದ ಬರುವವರನ್ನು ಕೊರೊನಾ ಪರೀಕ್ಷೆಗೆ ಒಳಪಡಿಸುವಂತೆ ಆದೇಶ ಮಾಡಲಾಗಿದೆ ಎಂದರು.

2-3 ದಿನಗಳಲ್ಲಿ ಹೊಸ ರೂಪಾಂತರಿಯಿಂದ ಪ್ರಕರಣಗಳು ಹೆಚ್ಚಾಗುತ್ತವೋ, ಇಲ್ಲವೋ ಎಂಬುದು ಗೊತ್ತಾಗುತ್ತದೆ. ಮುಂದಿನ ಪರಿಸ್ಥಿತಿ ನೋಡಿಕೊಂಡು ನಿರ್ಬಂಧಗಳನ್ನು ಹೇರುವ ಬಗ್ಗ ತೀರ್ಮಾನ ಮಾಡಲು ಸದ್ಯಕ್ಕೆ ಯಾವುದೇ ನಿರ್ಬಂಧ ಹೇರುವ ಅಗತ್ಯತೆ ಕಂಡು ಬಂದಿಲ್ಲ ಎಂದು ಅವರು ಹೇಳಿದರು.

ಹೊಸ ರೂಪಾಂತರಿಯಿಂದ ಕೋವಿಡ್ ಹೆಚ್ಚಾದರೆ ಅದನ್ನು ನಿಭಾಯಿಸಲು ಈಗಾಗಲೇ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಉಸಿರಾಟ, ಜ್ವರ ಸಮಸ್ಯೆ ಇರುವವರಿಗೆ ಕಡ್ಡಾಯವಾಗಿ ಕೊರೊನಾ ಪರೀಕ್ಷೆ ಸಹ ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ಪ್ರತಾಪ್‌ಸಿಂಹ ರಕ್ಷಣೆ ಆರೋಪ

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ ಸಂಸತ್ ಮೇಲಿನ ದಾಳಿ ಪ್ರಕರಣದಲ್ಲಿ ಸಂಸದ ಪ್ರತಾಪ್ ಸಿಂಹ ಅವರನ್ನು ರಕ್ಷಣೆ ಮಾಡಲಾಗುತ್ತಿದೆ ಎಂದು ದಿನೇಶ್‌ಗುಂಡೂರಾವ್ ಆರೋಪಿಸಿದರು.

ಪ್ರತಾಪ್ ಸಿಂಹ ಅವರ ಜಾಗದಲ್ಲಿ ಕಾಂಗ್ರೆಸ್ ಸಂಸದ ಇದ್ದಿದ್ದರೆ ಅವರನ್ನು ಉಚ್ಛಾಟಿಸುತ್ತಿದ್ದರು. ಪ್ರತಾಪ್ ಸಿಂಹ ಅವರ ರಕ್ಷಣೆಗೆ ಬಿಜೆಪಿ ನಿಂತಿದೆ. ಇದು ಸರಿಯಲ್ಲ. ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದಿನೇಶ್‌ಗುಂಡೂರಾವ್ ಒತ್ತಾಯಿಸಿದರು.

## ಮತದಾನವು ಮೂಲಭೂತ ಹಕ್ಕುಗಳಲ್ಲಿ ಒಂದಾಗಿದೆ: ಆನಂದ ಕಲ್ಲೋಳಿಕರ್



ಧಾರವಾಡ : ಮತದಾನವು ನಾಗರಿಕರಿಗೆ ಧ್ವನಿಯನ್ನು ನೀಡುತ್ತದೆ ಮತ್ತು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ. ನಮ್ಮ ಧ್ವನಿಯನ್ನು ಕೇಳಲು ಮತ್ತು ನಮಗೆ ಬೇಕಾದುದ್ದನ್ನು ಜಾರಿಗೆ ತರಲು ನಾವು ಮತ ಚಲಾಯಿಸಬೇಕು. ಮತದಾನವು ನಮ್ಮ ದೇಶವು ನಮಗೆ ನೀಡುವ ಮೂಲಭೂತ ಹಕ್ಕುಗಳಲ್ಲಿ ಒಂದಾಗಿದೆ ಎಂದು ಶ್ರೀ ಆನಂದ ಕಲ್ಲೋಳಿಕರ ಉಪ ಆಯುಕ್ತರು, ಅಂಜುಮನ್ ಪದವಿ ಮಹಾವಿದ್ಯಾಲಯದಲ್ಲಿ ಮತದಾರ ನೊಂದಣಿ ಅಭಿಯಾನದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ಹಕ್ಕುಗಳ ಮಹತ್ವ ಬಹಳ ಮುಖ್ಯ, ನಾಗರಿಕರು ತಮ್ಮ ಸರ್ಕಾರವನ್ನು ಆಯ್ಕೆ ಮಾಡುವ ಹಕ್ಕು ಹೊಂದಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ಹೆಸರನ್ನು ಮತದಾರ ಪಟ್ಟಿಯಲ್ಲಿ ಸುಲಭವಾಗಿ ಸೇರ್ಪಡೆ ಮಾಡಬಹುದು. ಪ್ಲೇ ಸ್ಟೋರದಿಂದ ವೋಟರ್ ಹೆಲ್ಪ್ ಲೈನ್ ಡೌನ್ಲೋಡ್ ಮಾಡಿಕೊಂಡು,ಕೇಳಿದ ಮಾಹಿತಿ ತುಂಬಿ ತಮ್ಮ ಹೆಸರನ್ನು ಮತದಾರ ಪಟ್ಟಿಯಲ್ಲಿ ಸುಲಭವಾಗಿ ಸೇರ್ಪಡೆ ಮಾಡಿಕೊಳ್ಳಬಹುದು ಎಂದು ಶ್ರೀ ನವೀನ ಹಿರೇಮಠ ಅವರು ಮಾತನಾಡಿದರು.

ಒಳ್ಳೆಯ ಮತ್ತು ಪ್ರಾಮಾಣಿಕ ನಾಯಕರನ್ನು ಆರಿಸುವ ಹಕ್ಕು ಎಲ್ಲಾ ಮತದಾರರ ಮೇಲೆ ಇದೆ. ಚುನಾವಣೆಯಲ್ಲಿ ಯುವ ಮತದಾರರ ಪಾತ್ರ ಪ್ರಾಮುಖ್ಯವಾಗಿದೆ. ಬ್ಯಾಲೆಟ್ ಬಾಕ್ಸ್ ಕೇವಲ ಬಾಕ್ಸಲ್ಲ ಅದು ಅತ್ಯಂತ ಶಕ್ತಿಶಾಲಿ ಆಯುಧ ಆಗಿದೆ. ಆದ್ದರಿಂದ ವಿದ್ಯಾರ್ಥಿಗಳು ಚುನಾವಣೆಯಲ್ಲಿ ತಪ್ಪದೇ ಭಾಗವಹಿಸಿ ತಮ್ಮ ಮತವನ್ನು ಚಲಾಯಿಸಬೇಕು ಎಂದು ಡಾ. ಶ್ರೀಮತಿ ಆಸ್ಮಾ ಬಳ್ಳಾರಿ ಅಧ್ಯಕ್ಷೀಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಈ ಸಂದರ್ಭದಲ್ಲಿ ಅಕ್ಷರಾ ಮುಲ್ಲಾ ಮತ್ತು ಶ್ವೇತಾ ವರಜಿಗಿ ಅವರು ಜಿಲ್ಲಾ ಮಟ್ಟದ ಕ್ವಿಜ್ಜಲ್ಲಿ ಪ್ರಥಮ ಸ್ಥಾನ ಗಳಿಸಿದ್ದಕ್ಕಾಗಿ ಹೂಗುಚ್ಛ ನೀಡಿ ಸ್ವಾಗತಿಸಲಾಯಿತು. ರಾಜ್ಯಮಟ್ಟದಲ್ಲಿ ಯಶಸ್ವಿಯಾಗಲು ಹಾರೈಸಲಾಯಿತು.

ಕಾರ್ಯಕ್ರಮಕ್ಕೆ ಬಂದ ಅತಿಥಿಗಳನ್ನು ಡಾ. ಎನ್ ಬಿ ನಲವತ್ವಾಡ ಸ್ವಾಗತಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರನ್ನು ಡಾ. ನಾಗರಾಜ್ ಗುದಗನವರ ಪರಿಚಯಿಸಿದರು. ಕಾರ್ಯಕ್ರಮವನ್ನು ಡಾ. ಸೌಭಾಗ್ಯ ಜಾದವ್ ನಿರೂಪಿಸಿದರೆ, ಡಾ. ಎಫ್. ಎಚ್.ನದಾಫ್ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಹುಬ್ಬಳ್ಳಿ ಧಾರವಾಡ ಮಹನಾಗರಿಕೆ ಪಾಲಿಕೆ ಸಿಬ್ಬಂದಿ ಮತ್ತು ಬೋಧಕ ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು.

## ನಗರದ ಹಂದಿಗಳಿಗೆ ಮುಂಜಾಗ್ರತಾ ಲಸಿಕೆ



ಬಾಗಲಕೋಟೆ : ಬಾಗಲಕೋಟ ನಗರದ ಹಳೆ ಪೋಸ್ಟ್ ಹತ್ತಿರ ಪಶುಪಾಲನ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಆರ್.ಎಸ್.ಪದರಾ ನೇತೃತ್ವದಲ್ಲಿ ರೋಗ ತಪಾಸಣೆ ಅಧಿಕಾರಿ ಡಾ.ಶ್ರವಣ್ ಕುಮಾರ್ ಗದ್ದಿ ಅವರು ಹಂದಿಗಳ ರಕ್ತದ ಮಾದರಿ ಸಂಗ್ರಹಿಸಿ ರೋಗ ಪರೀಕ್ಷೆಗೆ ಪ್ರಯೋಗಾಲಯಕ್ಕೆ ಕಳುಹಿಸಲಾಯಿತು.

ಮುಂಜಾಗ್ರತಾ ಕ್ರಮಕ್ಕೆ ಲಸಿಕೆ ಹಾಕಲಾಯಿತು. ಹಾಗೂ ಎಲ್ಲಾ ಹಂದಿ ಮಾಲೀಕರಲ್ಲಿ ತಮ್ಮ ಮಾಲೀಕತ್ವದ ಹಂದಿಗಳಿಗೆ ಲಸಿಕೆ ಹಾಕಲು ತಿಳುವಳಿಕೆ ನೀಡಿ ಸದ್ಯಕ್ಕೆ ಸಾಯುತ್ತಿರುವ ಹಂದಿಗಳನ್ನು ಕಾಪಾಡಿಕೊಳ್ಳಲು ಇಲಾಖೆ ಮತ್ತು ಸ್ಥಳೀಯ ನಗರಸಭೆ ಸಿಬ್ಬಂದಿಗಳ ಸಹಕಾರದೊಂದಿಗೆ ಹಂದಿಗಳನ್ನು ಸಂರಕ್ಷಿಸಿಕೊಳ್ಳಲು ತಿಳಿಸಲಾಯಿತು. ಪಶು ಆಸ್ಪತ್ರೆ ಸಿಬ್ಬಂದಿಗಳಾದ ಶಿವಕುಮಾರ ಸುನಗ, ವಿಜಯ ಬಿಂಗಿ ಮತ್ತು ಬಾಬುಸಾಬ್ ಡಂಗಿ ಹಾಗೂ ನಗರಸಭೆ ಸಿಬ್ಬಂದಿ ಇದ್ದರು.

## ಅಪ್ಪಾಜಿ ಯೂಥ್ ಫೌಂಡೇಶನ್ ವತಿಯಿಂದ ಕ್ರಿಕೆಟ್ ಪಂದ್ಯಾವಳಿ



ಹಾರೂಗೇರಿ : ಪಟ್ಟಣದ ಎಚ್. ವ್ಹಿ .ಎಚ್. ಶಾಲಾ ಮೈದಾನದಲ್ಲಿ ಅಪ್ಪಾಜಿ ಯೂಥ್ ಫೌಂಡೇಶನ್ ಹಮ್ಮಿಕೊಂಡಿದ್ದ ಪತ್ರಕರ್ತರಿಗೆ, ಹೆಸ್ಕಾಂ ಹಾಗೂ ಮಾರ್ನಿಂಗ್ ಕ್ರಿಕೆಟ್ ಕ್ಲಬ್, ಪುರಸಭೆಯ ಸಿಬ್ಬಂದಿ ಗಳೊಂದಿಗಿನ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮಾರ್ನಿಂಗ್ ಕ್ರಿಕೆಟ್ ಕ್ಲಬ್ ಪ್ರಥಮ ಸ್ಥಾನದಲ್ಲಿ ಹಾಗೂ ಹೆಸ್ಕಾಂ ಕ್ರಿಕೆಟ್ ತಂಡ ದ್ವಿತೀಯ ಸ್ಥಾನ ಪಡೆದು ತಲಾ ಒಂದು ಸಾವಿರ ರೂ. ಗಳ ನಗದು ಬಹುಮಾನ ತಮ್ಮದಾಗಿಸಿಕೊಂಡರು. ಈ ಸಂದರ್ಭದಲ್ಲಿ ಬಹುಮಾನ ಆಯೋಜಕರಾಗಿ ಆಧಾರ ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಡಾ. ಸಿ. ಆರ್. ಗುಡಸಿ, ಲೆಕ್ಕ ಪರಿಶೋಧಕರಾದ ಯುವಮಿತ್ರ ಮಹೇಶ ಮುಂಗುರವಾಡಿ ಹಾಗೂ ರಾಯಬಾಗ ಹೆಸ್ಕಾಂ ಎ.ಇ.ಇ. ಹಾರೂಗೇರಿ

ಪುರಸಭೆ ಮುಖ್ಯಾಧಿಕಾರಿ ಅಭಿಷೇಕ್ ಪಾಂಡೆ, ಆರ್. ಡಿ. ಸನಗೊಂಡ, ಅಮರ ಶಿಂಗಾಡೆ, ಪ್ರವೀಣ ಕಟ್ಟಿ, ಆಸೀಫ್ ಝಾರೆ, ವಿಜಯ ಪತ್ತಾರ, ಶಂಕರ ಪಾಗೆ, ಸಂಜು ಗಸ್ತಿ, ಹಣಮಂತ ಸಣ್ಣಕ್ಕಿನವರ, ವಿಠ್ಠಲ ಬಡಿಗೇರ, ಮಹಾದೇವ ಕಾಂಬಳೆ, ಸಂಜಯ್ ಗುರವ ಮುಂತಾದವರು ಪಾಲ್ಗೊಂಡಿದ್ದರು. ಅಪ್ಪಾಜಿ ಯೂಥ್ ಫೌಂಡೇಶನ್ ಅಧ್ಯಕ್ಷ ಸುನೀಲ ಕಬ್ಬೂರ ಪಂದ್ಯಾವಳಿ ಸಂಯೋಜಿಸಿದ್ದರು.

## ಗುಡ್ಡಾಪುರ ಪಾದಯಾತ್ರೆಗೆ ಚಾಲನೆ



ಮಹಾಲಿಂಗಪುರ: ಡಿಸೆಂಬರ್ 12ರಂದು ಜರುಗುವ ಗುಡ್ಡಾಪುರ ದಾನಮ್ಮ ದೇವಿ ಕಾರ್ತಿಕ ಉತ್ಸವಕ್ಕೆ ಪಟ್ಟಣದಿಂದ ನೂರಾರು ಸದ್ಭಕ್ತರು ಪಾದಯಾತ್ರೆ ಕೈಗೊಂಡರು.

ಈ ಪಾದಯಾತ್ರೆಗೆ ಪುರಸಭೆ ಸದಸ್ಯ ಯಲ್ಲನಗೌಡ ಪಾಟೀಲ್ ಚಾಲನೆ ನೀಡಿದರು. ಆಹಾರ ಪದಾರ್ಥಗಳ ಹೊತ್ತು ಸಾಗುವ ವಾಹನಕ್ಕೆ ಮಹಾಲಿಂಗೇಶ್ವರ ಮಠದ ಸ್ವಾಮೀಜಿ ಪೂಜೆ ನೆರವೇರಿಸಿದರು.

ಪಟ್ಟಣದ ಮಹಾಲಿಂಗೇಶ್ವರ ದೇವಸ್ಥಾನದಿಂದ ಕೃಷ್ಣಾ ನದಿ (ರಬಕವಿ) ಮಾರ್ಗವಾಗಿ ಮಹಿಷವಾಡಗಿ, ಸವದಿ, ಬಹವಾಡ, ಕೊಕಟನೂರ, ಐಗಳಿ (ಊಟ ಮತ್ತು ವಸತಿ), ಕುರುದಡ್ಡಿ, ಕಕಮರಿ, ಕೊಟ್ಟಲಗಿ, ಮುಚ್ಚಂಡಿ (ವಸತಿ), ಧರೆಕೊಣ್ಣೂರ, ಸೊರಡಿ ಮೂಲಕವಾಗಿ ನೇರ ಸುಕ್ಷೇತ್ರ ಗುಡ್ಡಾಪುರ ದಾನಮ್ಮದೇವಿ ದೇವಸ್ಥಾನಕ್ಕೆ ತಲುಪಲಿದ್ದಾರೆ.

ಪಾದಯಾತ್ರಿಕರು ಗುಡ್ಡಾಪುರಕ್ಕೆ ತೆರಳಿದ ನಂತರ ಮಹಾಲಿಂಗಪುರದ ಛತ್ರದಲ್ಲಿಯೇ ಉಳಿದುಕೊಳ್ಳಲು ಸಮಿತಿಯವರು ತಿಳಿಸಿದ್ದಾರೆ. ಎರಡೂ ದಿವಸ ಮುಂಜಾನೆ ಉಪಹಾರ ವ್ಯವಸ್ಥೆ ಮತ್ತು ಮಂಗಳವಾರ ದಿವಸ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ತದ ನಂತರ ಮಹಾ ಪ್ರಸಾದ. ಎಲ್ಲ ಪಾದಯಾತ್ರಿಕರು ಛತ್ರದಲ್ಲಿ ವೇಳೆಗೆ ಸರಿಯಾಗಿ ಹಾಜರಿರಬೇಕು.

ಯಲ್ಲನಗೌಡ ಪಾಟೀಲ್, ಅಶೋಕ ಅಂಗಡಿ, ಲಕ್ಕಪ್ಪ ಚಮಕೇರಿ, ಕಲ್ಲಪ್ಪ ಚಿಂಚಲಿ, ಬಸವರಾಜ ಪಾಶ್ಚಾಪೂರ, ಪ್ರಕಾಶ ಅರಳಿಕಟ್ಟಿ, ಸಿದ್ದು ಬೆನ್ನೂರ, ಕಲ್ಲಪ್ಪ ಹೆಬ್ಬಾಳ, ಪಟ್ಟೆದ, ಮಲ್ಲಪ್ಪ ದಲಾಲ, ಶಂಕರ ಸಾಲಮನಿ ಸೇರಿದಂತೆ ಹಲವರು ಇದ್ದರು.

ಹೆಚ್ಚಿನ ಮಾಹಿತಿಗಾಗಿ ಸಂಜು ಅಂಗಡಿ-9980030857, ಶೇಖರ ಬಂಡಿ-9591456156, ಅಶೋಕ ನುಚ್ಚಿ-9535618078, ಹೇಮಂತ ನಾಶಿ-9008311523, ಉದಯ ಮುಂಡಗನೂರ-9740879301, ರಮೇಶ ಹುಲಕುಂದ-9900971171 ಸಂಪರ್ಕಿಸಲು ತಿಳಿಸಿದ್ದಾರೆ.

## ಈ ಅಧಿವೇಶನದಲ್ಲೇ ಅಥಣಿ ಜಿಲ್ಲೆ ಘೋಷಣೆ ಮಾಡಲೇಬೇಕು

### ಅಥಣಿ ಜಿಲ್ಲಾ ಹೋರಾಟಕ್ಕೆ ಮಾಜಿ ಶಾಸಕ ಡೊಂಗರಗಾಂವ ಬೆಂಬಲ

ಅಥಣಿ : ಅಥಣಿ ಜಿಲ್ಲಾ ಬೇಡಿಕೆ ನಮ್ಮ ಹಕ್ಕು ಜಿಲ್ಲೆಗಾಗಿ ನಡೆಯುತ್ತಿರುವ ಹೋರಾಟದಲ್ಲಿ ಎಲ್ಲರೂ ಪಕ್ಷಾತೀತವಾಗಿ ಜಾತ್ಯಾತೀತವಾಗಿ ಭಾಗವಹಿಸುವ ಮೂಲಕ ಒಗ್ಗಟ್ಟು ಪ್ರದರ್ಶಿಸೋಣ ಅಥಣಿ ಜಿಲ್ಲೆಯ ಕೂಗು ಬೆಳಗಾವಿ ಅಧಿವೇಶನದಲ್ಲಿ ಪ್ರತಿಧ್ವನಿಸುವಂತೆ ಮಾಡೋಣ ಅದಕ್ಕಾಗಿ ಅಥಣಿ ಹಾಗೂ ಕಾಗವಾಡ ತಾಲೂಕಾ ಸೇರಿದಂತೆ ಸುತ್ತಮುತ್ತಲಿನ ತಾಲೂಕಿನ ಗ್ರಾಮಗಳ ನಾಗರಿಕ ಬಂಧುಗಳು, ಗಣ್ಯರು ಹಾಗೂ ಮುಖಂಡರುಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪ್ರತಿಭಟನೆಯಲ್ಲಿ ಭಾಗವಹಿಸಿ ಅಥಣಿ ಜಿಲ್ಲೆಗಾಗಿ ನಡೆಯುವ ಹೋರಾಟವನ್ನು ಬೆಂಬಲಿಸಿ ಯಶಸ್ವಿಗೊಳಿಸಬೇಕು ಎಂದು ಮಾಜಿ ಶಾಸಕ ಶಹಾಜಹಾನ ಡೊಂಗರಗಾಂವ ಅವರು ಅಥಣಿ ಹಾಗೂ ಕಾಗವಾಡ ಕ್ಷೇತ್ರದ ಜನರಲ್ಲಿ ಮನವಿ ಮಾಡಿದರು. ಅವರು ಪಟ್ಟಣದಲ್ಲಿರುವ ತಮ್ಮ ಸ್ವಗೃಹ ಕಚೇರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ ಅಥಣಿ ಜಿಲ್ಲೆ ಆಗಬೇಕು ಅನ್ನುವ ಬೇಡಿಕೆ ಅತ್ಯಂತ ಸೂಕ್ತವಾದುದು. ಬೇರೆ ತಾಲೂಕುಗಳಿಗೆ ಹೋಲಿಕೆ ಮಾಡಿದರೆ ಅಥಣಿ ಜಿಲ್ಲಾ ಕೇಂದ್ರದಿಂದ 160, ಹಾಗೂ ಗಡಿ ಭಾಗದ ಗ್ರಾಮಗಳಿಂದ ಸುಮಾರು 200 ಕಿ ಮೀ. ದೂರದಲಿದ್ದು ರೈತರಿಗೆ ಜನಸಾಮಾನ್ಯರಿಗೆ ಯಾವುದೇ ಒಂದು ಸರ್ಕಾರಿ ಕೆಲಸದ ನಿಮಿತ್ತ ಹೋಗಬೇಕಾದರೆ ಒಂದು ದಿನ ಪೂರ್ತಿ ಸಾಕಾಗುವುದಿಲ್ಲ ಅಥಣಿಯಿಂದ ಬೆಳಗಾವಿಗೆ ಹೋಗಬೇಕಾದರೆ ಮದ್ಯಾಹ್ನವಾಗುತ್ತದೆ ಹೀಗಾಗಿ ಸಕಾಲಕ್ಕೆ ಯಾವುದೇ ಕೆಲಸ ಆಗದೆ ಇರುವುದರಿಂದ ಜನ ಸಾಮಾನ್ಯರಿಗೆ ಕಷ್ಟ ಅನುಭವಿಸಬೇಕಾಗುತ್ತದೆ.

# ಅಪರಿಚಿತ ಗಂಡಸಿನ ವಾರಸುದಾರರ ಪತ್ತೆಗೆ ನೆರವು



ಬಾಗಲಕೋಟೆ : ಪಢನೂರು ಹಾಲ್ಟಿಂಗ್ ರೈಲು ನಿಲ್ದಾಣದಲ್ಲಿ ಚಲಿಸುವ ರೈಲಿಗೆ ಸಿಕ್ಕು ಗಾಯಗೊಂಡು 55 ವರ್ಷದ ಅಪರಿಚಿತ ವ್ಯಕ್ತಿಯನ್ನು ಆಸ್ಪತ್ರೆಗೆ ಸಾಗಿಸಲು ವಿಜಯಪುರ ರೈಲು ನಿಲ್ದಾಣಕ್ಕೆ ಕರೆದುಕೊಂಡು ಬರುವಾಗ ಮಾರ್ಗ ಮಧ್ಯ ಮೃತಪಟ್ಟಿದ್ದು, ಪ್ರಕರಣ ದಾಖಲಿಸಿಕೊಂಡು ವಾರಸುದಾರರ ಪತ್ತೆಗೆ ತನಿಖೆಯಲ್ಲಿರುತ್ತದೆ.

ಮೃತ ವ್ಯಕ್ತಿ 5.5 ಅಡಿ ಎತ್ತರ, ಸಾದಗಪ್ಪು ಮೈಬಣ್ಣ, ದಪ್ಪನೆಯ ಮೈಕಟ್ಟು, ಕೋಲು ಮುಖ, ಮೊಂಡ ಮೂಗು, ತಲೆಯಲ್ಲಿ ಬಿಳಿ, ಕಪ್ಪು ಕೂದಲು, ಬೂದು ಬಣ್ಣದ ಜಾಕೆಟ್, ಕ್ರೀಮ್ ಕಲರ್ ರೆಡಿಮೆಡ್ ಪ್ಯಾಂಟ್, ಚಾಕಲೇಟ್ ಬಣ್ಣದ ಬರಮೋಡ, ಕೊರಳಲ್ಲಿ ಕಪ್ಪು ದಾರ ಧರಿಸಿದ್ದಾರೆ. ಇತರ ಬಗ್ಗೆ ಪತ್ತೆಯಾದಲ್ಲಿ ಆರಕ್ಷಕ ಉಪ ನಿರೀಕ್ಷಕರು, ರೇಲ್ವೆ ಪೊಲೀಸ್ ಠಾಣೆ, ವಿಜಯಪುರ ದೂಸಂ.08352-250883, ಕಂಟ್ರೋಲ್ ರೂಮ್ ನಂ.080-22871291ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಪ್ರಕಟಣೆ ತಿಳಿಸಿದೆ.

# ಅನಿಲ್ ಕುಮಾರ ಅವರಿಗೆ ಪಿಎಚ್.ಡಿ ಪ್ರದಾನ



ಬೆಂಗಳೂರು : ಬೆಂಗಳೂರು ವಿಶ್ವವಿದ್ಯಾಲಯದ ಯುಜಿಸಿ-ಮಹಿಳಾ ಅಧ್ಯಯನ ಕೇಂದ್ರದ ಸಂಶೋಧನಾ ವಿದ್ಯಾರ್ಥಿ ಅನಿಲ್ ಕುಮಾರ ಅವರು ಯುಜಿಸಿ-ಮಹಿಳಾ ಅಧ್ಯಯನ ಕೇಂದ್ರದ ಸಮನ್ವಯಾಧಿಕಾರಿ ಮತ್ತು ಸಹಪ್ರಾಧ್ಯಾಪಕ ಡಾ. ಎಂ. ಸಿದ್ದಪ್ಪ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ "ಕನ್ನಡ ರಂಗಭೂಮಿ ಮಹಿಳಾ ಕಲಾವಿದರು: ಒಂದು ಸ್ತ್ರೀವಾದಿ ಅಧ್ಯಯನ" ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

# ಬಸ್ ಸೌಕರ್ಯಕಾಗಿ ಪ್ರತಿಭಟನೆ

ಇಂಡಿ: ಡಿ.9: ತಾಲೂಕಿನ ಹಂಜಗಿ ಗ್ರಾಮದ ಸುಮಾರು 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಸುಮಾರು 6 ಕಿ.ಮಿ ಪಾದಯಾತ್ರೆ ಮೂಲಕ ಇಂಡಿ ಕರ್ನಾಟಕ ರಸ್ತೆ ಸಾರಿಗೆ ಘಟಕದ ಮುಂದೆ ಒಂದು ಗಂಟೆ ಕಾಲ ಮುಷ್ಕರ ಮಾಡಿ ಘಟಕ ವ್ಯವಸ್ಥಾಪಕ ಬಿರಾದಾರ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಜೆಡಿ ಎಸ್ ಮುಖಂಡ ಬಿ.ಡಿ.ಪಾಟೀಲ ವಿದ್ಯಾರ್ಥಿಗಳ ಸಮಸ್ಯೆಯನ್ನು ಆಲಿಸಿ ನಂತರ ಮಾತನಾಡಿ ಹಂಜಗಿ,ನಿಂಬಾಳ, ಕೊಳುರಗಿ ಮಾರ್ಗದ ಬಸ್ ಸರಿಯಾಗಿ ಸಮಯಕ್ಕೆ ಬರುವದಿಲ್ಲ.ಹೀಗಾಗಿ ವಿದ್ಯಾರ್ಥಿಗಳು ಬಸ್ ಗಾಗಿ ಕಾಲಹರಣ ಮಾಡುವ ಪರಿಸ್ಥಿತಿ ಪ್ರತಿನಿತ್ಯ ಇದೆ.

# ಪ್ರಕಾಶ ಚಕ್ರವರ್ತಿ ಮನವಿಗೆ ಸ್ಪಂದಿಸಿ: ಜಿಲ್ಲಾಧಿಕಾರಿಗಳ ಭೇಟಿ ಪರಿಶೀಲನೆ



ಮುಧೋಳ : ನಗರದ ವಾರ್ಡ 24 ಹಿರಿಕೇರಿ ಗಲ್ಲಿ ಹಾಗೂ ಜುಂಜರಕೊಪ್ಪ ಗಲ್ಲಿ ಮತ್ತು ಭಜಂತ್ರಿ ಗಲ್ಲಿಯಲ್ಲಿರುವ ಮೂಲಭೂತ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳಾದ ಶ್ರೀಮತಿ ಎಮ್ ಜಾನಕಿ ಅವರು ಪ್ರತ್ಯೇಕ ಬೇಟಿ ನೀಡಿ ಮೂಲಭೂತ ಸೌಕರ್ಯಗಳ ಸಮಗ್ರ ಪರಿಶೀಲನೆ ಮಾಡಿದರು.

ಬಾಗಲಕೋಟೆ ಜಿಲ್ಲಾ ಖಕ ಕಚೇರಿಯಲ್ಲಿ ನಡೆದ ಖಅ/ಖಖ ಕುಂದು ಕೊರತೆ ಸಭೆಯಲ್ಲಿ ಸಾಮಾಜಿಕ ಹೋರಾಟಗಾರ ಯುವ ನಾಯಕ ಹಾಗೂ ಸಾಮಾಜಿಕ ಚಿಂತಕರಾದ ಪ್ರಕಾಶ ಚಕ್ರವರ್ತಿ ಯವರು ಮುಧೋಳ ನಗರದ ವಾರ್ಡ್ ನಂಬರ್ 24 ಹಿರಿಕೇರಿ ಗಲ್ಲಿ ಹಾಗೂ ಜುಂಜರಕೊಪ್ಪ ಗಲ್ಲಿ ಮತ್ತು ಭಜಂತ್ರಿ ಗಲ್ಲಿಯಲ್ಲಿರುವ ಮೂಲಭೂತ ಸೌಕರ್ಯಗಳ ಸಮಸ್ಯೆಗಳ ಕುರಿತು ಪ್ರಶ್ನಿದ ಕಾರಣ ಜಿಲ್ಲಾಧಿಕಾರಿಗಳಾದ ಶ್ರೀಮತಿ ಎಮ್ ಜಾನಕಿ ಅವರು ಪ್ರತ್ತೇಕ ಬೇಟಿ ನೀಡಿದರು ಪ್ರಕಾಶ ಚಕ್ರವರ್ತಿ ಹಾಗೂ ಅವರ ಬೆಂಬಲಿಗರು ಸೇರಿ ಜಿಲ್ಲಾಧಿಕಾರಿಗಳನ್ನು ಆದರದಿಂದ ಸ್ವಾಗತಿಸಿದರು.ಮತ್ತು ವಾರ್ಡಿನಲ್ಲಿನ ಮೂಲಭೂತ ಸೌಕರ್ಯಗಳ ಸಮಗ್ರ ಪರಿಶೀಲನೆ ಮಾಡಿದರು , ಸ್ವತಂತ್ರ ದೊರೆತ 75 ವರ್ಷ ಕಳೆದ ನಂತರ ಪ್ರಥಮ ಬಾರಿಗೆ ಕುಂದು ಕೊರತೆ ಪರಿಶೀಲನೆಗಾಗಿ ಖಅ ಕಾಲೋನಿಗೆ ಆಅ ಅವರ ಆಗಮನ ಹಾಗೂ ಅಪರ ಆಅ , ತಹಶೀಲ್ದಾರ,ವಿನೋದ ಹತ್ತಳ್ಳಿ . ಪೌರಾಯುಕ್ತರಾದ ಶಿವಾನಂದ ಅಂಬಿಗೇರ ಹಾಜರಿದ್ದು. ಇಲ್ಲಿನ ಸಮಸ್ಯೆಗಳಾದ ಕುಡಿಯುವ ನೀರು, ಒಳ ಚರಂಡಿ, ಅಅ ರಸ್ತೆ, ವಿದ್ಯುತ್ ಕಂಬಗಳು, ಬೀದಿ ದೀಪಗಳು, ಅಂಗನವಾಡಿ, ಸರ್ಕಾರಿ ಶಾಲೆ, ಸಾಮೂಹಿಕ ಶೌಚಾಲಯ, ಆರೋಗ್ಯ ಹಾಗೂ ಶಿಕ್ಷಣದ ಬಗ್ಗೆ ಸಮಕ್ಷಮ ಚರ್ಚೆ ಮಾಡಿದ ನಂತರ ಶೀಘ್ರದಲ್ಲಿ ಸಮಸ್ಯೆಗಳ ಪರಿಹಾರ ಮಾಡುವುದಾಗಿ ಭರವಸೆ ಮಾತುಗಳನ್ನು ಹೇಳಿದರು.

# 4 ಲಕ್ಷದವರೆಗಿನ ಶಾಲಾ ವಸ್ತುಗಳ ವಿತರಣೆ







ಮುಧೋಳ : ತಾಲೂಕಿನ ಹಲಗಲಿ ಗ್ರಾಮದ ಸರಕಾರ ಮಾದರಿ ಪ್ರಾಥಮಿಕ ಶಾಲೆಗೆ ಯುರೋಪಿಯನ್ ಸಾಫ್ಟ್ವೇರ್ ಐಟಿ ಸೋಲ್ಯುಸನ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇವರ ಸಹಕಾರದೊಂದಿಗೆ ರೋಟರಿ ಕ್ಲಬ್ ಮುಧೋಳ ಇವರಿಂದ ಸುಮಾರು ಮೂರರಿಂದ ನಾಲ್ಕು ಲಕ್ಷದವರೆಗಿನ ಒಳ್ಳೆಯ ಗುಣಮಟ್ಟದ 8 ಗ್ರೀನ್ ಬೋರ್ಡ್ ಹಾಗೂ 270 ಮಕ್ಕಳಿಗೆ ಶಾಲಾ ಬ್ಯಾಗ್ ಮತ್ತು ನೀರಿನ ಬಾಟಲಿಗಳನ್ನು ನೀಡಿದ ಮಹನೀಯರಿಗೆ ಸನ್ಮಾನ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷರಾದ ಹನುಮಂತ ಕುಂಬಾರ ಅವರು ವಹಿಸಿಕೊಂಡಿದ್ದರು.

ಮುಖ್ಯ ಅತಿಥಿಯಾಗಿ ವೀರಣ್ಣ ಕಣಬೂರ ಮಾತನಾಡಿ ನಾನು ಕಲಿತ ಶಾಲೆಯ ಬಡ ಮಕ್ಕಳ ಅಭಿವೃದ್ಧಿಗಾಗಿ ನನ್ನ ಸಹಾಯ ಹಸ್ತ ಎಂದಿಗೂ ಇರುತ್ತದೆ ಎಂದು ಹೇಳಿದರು.

ರೋಟರಿ ಕ್ಲಬ ಅಧ್ಯಕ್ಷರಾದ ಅರ್ಜುನ ಕೊಡಗ ಮಾತನಾಡಿ ಸರ್ಕಾರಿ ಶಾಲೆಯ ಬಡ ಮಕ್ಕಳ ಸಬಲೀಕರಣಕ್ಕಾಗಿ ನಮ್ಮ ಸಂಸ್ಥೆ ಯಾವತ್ತೂ ನಿಮ್ಮ ಜೊತೆಯಲ್ಲಿ ಇರುತ್ತದೆ ಎಂದು ಹೇಳಿದರು.

ಶಾಲೆಯ ಎಸ್ ಡಿ ಎಂ ಸಿ ಸದಸ್ಯರಾದ ವೀರಣ್ಣ ಮಾಬನ್ನವರ ಮಾತನಾಡಿ ಸರ್ಕಾರಿ ಎರಡು ವರ್ಷಗಳಿಂದ ಶಾಲೆಗಳನ್ನು ಉಳಿಸಿ ಸರ್ಕಾರಿ ಶಾಲೆಗಳನ್ನು ಬೆಳೆಸಿ ಎಂಬ ಅಭಿಯಾನವನ್ನು ನಡೆಸುತ್ತಾ ಬಂದಿದ್ದು ಇದರ ಭಾಗವಾಗಿ ಇವತ್ತು ರೋಟರಿ ಸಂಸ್ಥೆಯವರು ನಮ್ಮ ಶಾಲೆಗೆ ಇಂಥ ದೊಡ್ಡ ಪ್ರಮಾಣ ಸಹಾಯ ಹಸ್ತ ನೀಡಿದ್ದು ಅವರಿಗೆ ಎಷ್ಟು ಧನ್ಯವಾದಗಳು ಹೇಳಿದರು ಸಾಲದು ಎಂದು ಹೇಳಿದರು ಮತ್ತು ಸರ್ಕಾರ ಶಾಲೆಗಳು ಉಳಿಯಬೇಕಾದರೆ ಇಂತಹ ಸಂಸ್ಥೆಗಳ ಪಾತ್ರ ದೊಡ್ಡದು ಎಂದು ಹೇಳಿದರು. ಶಾಲೆಯ ಮುಖ್ಯ ಗುರುಗಳಾದ ಎಚ್ ಸಿ ಮಡಿವಾಳರ ಮಾತನಾಡಿ ಇಂತಹ ಸಂಸ್ಥೆಗಳು ಇರುವುದರಿಂದ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಬೇಕಾದ ಪರಿಕರಗಳು ಸಿಗುತ್ತವೆ ಇವುಗಳನ್ನು ಉಪಯೋಗ ಮಾಡಿ ಕೊಂಡು ಅಗತ್ಯ ಶಿಕ್ಷಣ ನೀಡುತ್ತೇವೆ ಎಂದು ಭರವಸೆ ಹೇಳಿದರು.

ಈ ಸಂದರ್ಭದಲ್ಲಿ ಎಸ್ ಡಿ ಎಂ ಸಿ ಉಪಾಧ್ಯಕ್ಷರಾದ ಶ್ರೀಮತಿ ಹೇಮಾ ಕಳಸಗೊಪ್ಪ. ಸದಸ್ಯರುಗಳಾದ ವೀರಣ್ಣ ಹಿರಕಣ್ಣವರ. ಶ್ರೀಮತಿ ಬಸವ್ವ ಕೊಳ್ಳನವರ ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಹಾಗೂ ಶಾಲೆಯ ವಿದ್ಯಾರ್ಥಿಗಳು ಉಪಸಿತರಿದ್ದರು.

# ಆಲಮೇಲ: ಕಾರ್ತಿಕ ದೀಪೋತ್ಸವ

ಆಲಮೇಲ : ಪಟ್ಟಣದ ಗುರು ಸಂಸ್ಥಾನ ಹಿರೇಮಠದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ಮಾಜಿ ಜಿ.ಪಂ ಸದಸ್ಯ ಶಂಕ್ರೆಮ್ಮ ಹೂಗಾರ ಹಾಗೂ ಹಿರಿಯ ಮಹಿಳೆ ಮಂಗಳ ಗುಡಿ ಅಕ್ಕನವರ ಸಹಯೋಗದಲ್ಲಿ ಇಲ್ಲಿನ ಮಹಿಳೆಯರು ದೀಪೋತ್ಸವ ಆಚರಿಸಿ ಸಂಭ್ರಮಿಸಿದರು. ಶ್ರೀ ಮಠದ ಪೂಜ್ಯರಾದ ಚಂದ್ರಶೇಖರ ಶಿವಾಚಾರ್ಯ ಹಾಗೂ ಸಂಗನಬಸವ ಶಿವಾಚಾರ್ಯರು ಸಮ್ಮುಖದಲ್ಲಿ ಲಿಂಗೈಕ್ಯ ಸಿದ್ದಲಿಂಗ ಶಿವಾಚಾರ್ಯರ ಹಾಗೂ ಲಿಂಗೈಕ್ಯ ಮಳೇಂದ್ರ ಶಿವಾಚಾರ್ಯರ ಕರ್ತೃ ಗದ್ದಿಗೆಗೆ ಪಟ್ಟಣದ ಮಹಿಳಾ ಬಳಗದವರು ವಿಶೇಷವಾದ ಪೂಜೆ ನೆರವೇರಿಸಿ, ದೀಪಾರತಿ ಮಾಡಿ, ಪ್ರಾರ್ಥನೆ ಸಲ್ಲಿಸಿ, ಅನೇಕ ಭಜನೆ ಪದಗಳನ್ನು ಹಾಡಿ, ದೇವರ ಕೃಪೆಗೆ ಪಾತ್ರರಾದರು.

# ಮಹಿಳೆಯರಿಗೆ ಸ್ಪೂರ್ತಿ ಈ ನಾರಿ ಶಕ್ತಿ ಉಮಾದೇವಿ



ಸಾಧನೆ ಯಾರೊಬ್ಬರ ಮನೆಯ ಸ್ವತ್ತಲ್ಲ.ಅದಕ್ಕೆ ಜಾತಿ.ವಯಸ್ಸು.ಲಿಂಗದ ಭೇದವಿಲ್ಲ ಎಂಬುದು ಸಾಬೀತು ಪಡಿಸಿದವರು ಬೆಂಗಳೂರಿನ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್ ಉಮಾದೇವಿ ನಾಗರಾಜ್.ಹೌದು ಈ ಕ್ರೀಡಾ ಸಾಧಕಿಯ ಕಥೆ ಕೇಳಿದರೆ ಎಂತಹವರಿಗೂ ಸಾಧಿಸುವ ಛಲ ಹುಟ್ಟುತ್ತದೆ ತಮ್ಮ 28 ನೇ ವಯಸ್ಸಿನಲ್ಲಿ ಎಲ್ಲರಂತೆ ಮದುವೆ ಮಕ್ಕಳು ಎಂದು ಹೊಸ ಬದುಕು ಕಟ್ಟಿಕೊಳ್ಳುತ್ತ.ತಮ್ಮ ಖಾಸಗಿ ಜೀವನಕ್ಕೆ ಆದ್ಯತೆ ನೀಡುತ್ತ ಜೀವನ ಸಾಗಿಸಬಹುದಿತ್ತು ಆದರೆ ಇವರು ಮಾತ್ರ ವಿಭಿನ್ನ ಇವರು ತಮ್ಮ 28 ನೇ ವಯಸ್ಸಿನಲ್ಲಿ ತಮ್ಮ ಆಸಕ್ತಿ ಕೌಶಲ್ಯವನ್ನು ಗುರುತಿಸಿಕೊಂಡು ಅದರತ್ತ ಮುಖ ಮಾಡಿದವರು.ಇವರು ಮಾಡಿರುವ ಸಾಧನೆ ಅಪಾರವಾಗಿದ್ದರು.ಎಲ್ಲ ಮಹಿಳೆಯರಿಗೆ ಸ್ಪೂರ್ತಿ ತುಂಬುವಂತೆ ಇದ್ದರೂ ಹೆಚ್ಚು ಬೆಳಕಿಗೆ ಬಾರದೆ ಸಾಧನೆಯತ್ತಲೆ ಗಮನ ನೆಟ್ಟವರು.ಇವರು ಭಾರತ ಕಂಡ ಶ್ರೇಷ್ಠ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಆಟಗಾರ್ತಿ ಇವರು ನಮ್ಮ ಕರ್ನಾಟಕದವರೆ ಎಂಬುದು ಹೆಮ್ಮೆಯ ಸಂಗತಿ. ಚಿಕ್ಕ ವಯಸ್ಸಿನಲ್ಲೆ ನಿರ್ದಿಷ್ಟ ಗುರಿಯ ಪಥದಲ್ಲಿ ಸಾಗುವ ಸಾಧಕರದ್ದು ಒಂದೆ ಧ್ಯಾನ ಹಗಲಿರುಳು ಅವರ ಹಂಬಲ ಸಿದ್ದತೆ ಅದಕ್ಕಾಗಿಯೇ ಅವರು ಪೂರ್ವ ತಯಾರಿಗಳನ್ನು ಬಹಳ ಬಲಿಷ್ಟತೆಯಿಂಥ ಮಾಡಿಕೊಂಡಿರುತ್ತಾರೆ.ಉಮಾದೇವಿಯವರು ವೃತ್ತಿಯೊಂದಿಗೆ ಪ್ರವೃತ್ತಿಯನ್ನು ಕೂಡಾ ಸರಿದೂಗಿಸಿಕೊಂಡು ಯಶಸ್ಸು ಸಾಧಿಸಿದ ಸಾಧಕಿ. ಸಾಧನೆಯ ಹಾದಿ – 1996 ರಲ್ಲಿ ಮೊದಲ ಬಾರಿ ಸ್ನೂಕರ್ ಹಾಗೂ ಬಿಲಿಯರ್ಡ್ಸ್ ಟೇಬಲ್ ನಲ್ಲಿ ಕಾಣಿಸಿಕೊಂಡ ಉಮಾದೇವಿ ಬಳಿಕ ರಾಷ್ಟ್ರೀಯ ಮಟ್ಟದಲ್ಲಿ 7 ಬಾರಿ ಚಾಂಪಿಯನ್ ಪಟ್ಟ ಗೆದ್ದಿದ್ದಾರೆ 2012 ರಲ್ಲಿ ಇಂಗ್ಲೆಂಡನ್ನ ಕೇಂಬ್ರಿಡ್ಜ್ ನಲ್ಲಿ ನಡೆದ ವಿಶ್ವ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್ ಶಿಪ್ ನಲ್ಲಿ ಚಿನ್ನದ ಪದಕ ಪಡೆದು ಇತಿಹಾಸ ನಿರ್ಮಿಸಿದ್ದಾರೆ.ರಾಜ್ಯಮಟ್ಟದಲ್ಲಿ 11 ಬಾರಿ ಚಾಂಪಿಯನ್ ಮತ್ತು 7 ಬಾರಿ ರನ್ನರ್ ಆಫ್ ಗೌರವಕ್ಕೆ ಪಾತ್ರರಾಗಿದ್ದಾರೆ.4 ಬಾರಿ ರಾಜ್ಯ ಸ್ನೂಕರ್ ಚಾಂಪಿಯನ್ ಪಟ್ಟ ಗಳಿಸಿದ್ದಲ್ಲದೆ 8 ಬಾರಿ ರನ್ನರ್ ಆಫ್ ಎನಿಸಿಕೊಂಡಿದ್ದಾರೆ.2013 ರಲ್ಲಿ ಐಬಿಎಸ್ಎಫ್ ವಿಶ್ವ ಚಾಂಪಿಯನ್ ಶಿಪ್ ನಲ್ಲಿ ರನ್ನರ್ ಆಫ್ ಆಗಿದ್ದಾರೆ.ಅಲ್ಲದೆ ಭಾರತದಲ್ಲಿ ನಡೆದ ಸುಮಾರು 12 ವಿವಿಧ ವೃತ್ತಿಪರ ಸ್ನೂಕರ್ ಮತ್ತು ಬಿಲಿಯರ್ಡ್ಸ್ ಚಾಂಪಿಯನ್ ಶಿಪ್ ಗಳಲ್ಲಿ ಪಾಲ್ಗೊಂಡು ಹಲವಾರು ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಇವರ ಸಾಧನೆಯನ್ನು ಗುರುತಿಸಿ ಅನೇಕ ಜಿಲ್ಲಾ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.ಇವರ ಸಾಧನೆಯನ್ನು ಗುರುತಿಸಿ ಕೇಂದ್ರ ಸರ್ಕಾರ ನಾರಿ ಶಕ್ತಿ ಪ್ರಶಸ್ತಿ ನೀಡಿ ಗೌರವಿಸಿದೆ ಇಂತಹ ವಿಶೇಷ ಮಹಿಳಾ ಸಾಧಕಿಯನ್ನು ಪತ್ರಕರ್ತ ಕಾಡೇಶ ಕಂಪು ಸಂಪರ್ಕಿಸಿದಾಗ ತಮ್ಮ ಸಾಧನೆಯ ಹಾದಿಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟು ಸಾಧನೆಗೆ ಜಾತಿ ಮತ ಪಂಥ ಬಡತನ ಅಡ್ಡಿಯಾಗದು ಅದಕ್ಕೆ ಸಾಧಿಸುವ ಮನಸ್ಸೊಂದಿದ್ದರೆ ಗುರಿ ಮುಟ್ಟಲು ಸಾಧ್ಯವೆಂದರು.

# ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ಆಗ್ರಹ



ರಬಕವಿ-ಬನಹಟ್ಟಿ: ಸಮಾಜದ ಅಂಗವಾಗಿ ಕಕ್ಷಿದಾರರಿಗೆ ನ್ಯಾಯ ಒದಗಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವ ವಕೀಲರ ಮೇಲೆ ಮೇಲಿಂದ ಮೇಲೆ ಹಲ್ಲೆಗಳು ಆಗುತ್ತಿದ್ದು , ಸದ್ಯ ಕಲಬುರಗಿ ವಕೀಲರ ಸಂಘದ ಸದಸ್ಯರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಇದರಿಂದಾಗಿ ವಕೀಲರು ಸಂಕಷ್ಟದ ಪರಿಸ್ಥಿತಿಯಲ್ಲಿ ಇದ್ದಾರೆ. ಆದ್ದರಿಂದ ಸರ್ಕಾರ ಆದಷ್ಟು ಬೇಗನೆ ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ತರಬೇಕು. ಹತ್ಯೆ ಮಾಡಿದವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಂಡು ಅವರಿಗೆ ಕಠಿಣ ಶಿಕ್ಷೆಯನ್ನು ನೀಡಬೇಕು ಎಂದು ವಕೀಲರ ಸಂಘದ ಅಧ್ಯಕ್ಷ ಶ್ರೀಕಾಂತ ಕುಲಕರ್ಣಿ ತಿಳಿಸಿದರು.

ಸೋಮವಾರ ಕಲಬುರಗಿ ವಕೀಲರ ಸಂಘದ ಸದಸ್ಯ ಈರಣ್ಣಗೌಡ ಪೊಲೀಸಪಾಟೀಲರ ಹತ್ಯೆಯನ್ನು ಖಂಡಿಸಿ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ವಕೀಲರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ವಕೀಲರಿಗೆ ಸೂಕ್ತ ರಕ್ಷಣೆಯನ್ನು ನೀಡುವತ್ತ ಸರ್ಕಾರ ಗಮನ ನೀಡಬೇಕು ಎಂದು ಕುಲಕರ್ಣಿ ಆಗ್ರಹಿಸಿದರು.

ಈಶ್ವರಚಂದ್ರ ಭೂತಿ, ಎ. ಕೆ. ಸಲಬನ್ನವರ, ಮುಕುಂದ ಕೋಪರ್ಡೆ, ರಾಜು ಫಕೀರಪೂರ, ಚನ್ನು ಮಾಲಾಪುರ, ಅಶ್ವಿನಿ ಹಾರೂಗೇರಿ, ದಿನೇಶ ಮುರಾಬಟ್ಟಿ, ಅಖಿಲ ವ್ಯಾಸ್, ಅರ್ಜುನ ಜಿಡ್ಡಿಮನಿ, ವಿನೋದ ಖೇಮಣ್ಣನವರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಸುಗಮವಾಗಿ ವರ್ಗಗಳು ನಡೆಯುವಂತೆ ಕ್ರಮ ತೆಗೆದುಕೊಳ್ಳಿ



ರಬಕವಿ-ಬನಹಟ್ಟಿ: ರಬಕವಿ ಬನಹಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರು ನವೆಂಬರ 23 ರಿಂದ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ತರಗತಿಗಳನ್ನು ಬಹಿಷ್ಕರಿಸಿ ಮುಷ್ಕರ ನಡೆಸುತ್ತಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಹಿನ್ನಡೆಯಾಗುತ್ತಿದೆ. ಒಂದು ಸೆಮ್ ನಲ್ಲಿ 56 ವರ್ಗಗಳು ನಡೆಯಬೇಕು. ಆದರೆ ಇದುವರೆಗೆ ಕೇವಲ 16 ವರ್ಗಗಳು ಮಾತ್ರ ನಡೆದಿವೆ. ಇದರಿಂದಾಗಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗಿದೆ. ಆದ್ದರಿಂದ ಆದಷ್ಟು ಬೇಗನೆ ನಿಯಮಿತವಾಗಿ ಮತ್ತು ಸುಗಮವಾಗಿ ವರ್ಗಗಳು ನಡೆಯುವಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ಕಾಲೇಜು ವಿದ್ಯಾರ್ಥಿಗಳು ಸೋಮವಾರ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಹೇಶ ಆಲಕನೂರ ಮಾತನಾಡಿ, ಹದಿನೆಂಟು ದಿನಗಳಿಂದ ವರ್ಗಗಳು ನಡೆಯುತ್ತಿಲ್ಲ. ಇದರಿಂದಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಓದುತ್ತಿರುವ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಆದ್ದರಿಂದ ಆದಷ್ಟು ಬೇಗನೆ ವರ್ಗಗಳು ನಡೆಯುವಂತೆ ಕ್ರಮ ತೆಗೆದುಕೊಳ್ಳಬೇಕು ಎಂದರು.

ಬಸವರಾಜ ಮುದ್ದಾಪುರ ಮತ್ತು ರಾಮಣ್ಣ ನಾಯಕ ಮಾತನಾಡಿ, ಅತಿಥಿ ಉಪನ್ಯಾಸಕರು ಮುಷ್ಕರದಲ್ಲಿ ತೊಡಗಿರುವುದರಿಂದ ವರ್ಗಗಳು ಸರಿಯಾಗಿ ನಡೆಯುತ್ತಿಲ್ಲ. ಇದರಿಂದಾಗಿ ನಾವು ಶೈಕ್ಷಣಿಕವಾಗಿ ಹಿಂದುಳಿಯುತ್ತಿದ್ದೇವೆ. ಇದರಿಂದಾಗಿ ನಮಗೆ ಭವಿಷ್ಯದಲ್ಲಿಯೂ ಕೂಡಾ ತೊಂದರೆಯಾಗಲಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ನೀಡಿ ಆದಷ್ಟು ಬೇಗನೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಓದುತ್ತಿರುವ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.


ರಾಮಣ್ಣ ನಾಯಕ, ಕಾಳಪ್ಪ ಬಡಿಗೇರ, ಆಕಾಶ ಕೊಡಗನೂರ, ಉಮೇಶ ಹಿಟಗೋಣಿ, ಸಂದೀಪ ಟಿರಕಿ, ಸಹನಾ ಚಿಂಚಖಂಡಿ, ತನುಜಾ ಪಾವಟೆ, ಸರಸ್ವತಿ ಕೊಕಟನೂರ, ಸನ್ಮತಿ ತಮದಡ್ಡಿ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಜಗದಾಳ ಪಿಕೆಪಿಎಸ್: ಉಳ್ಳಾಗಡ್ಡಿ ಬಣಕ್ಕೆ ಗೆಲುವು

## ಢವಳೇಶ್ವರ, ಸಸಾಲಟ್ಟಿ, ಜಗದಾಳ ಬಿಜೆಪಿ ಬೆಂಬಲಿತ ಪಾಲಾದರೆ, ತೇರದಾಳ ಹಾಗೂ ಮಹಾಲಿಂಗಪೂರ ಅವಿರೋಧ

ರಬಕವಿ-ಬನಹಟ್ಟಿ.: ರಾಜಕೀಯದಷ್ಟೇ ಪ್ರಬಲವಾದ ಗ್ರಾಮ ಪಂಚಾಯಿತಿಗೆ ಸಮಾನವಾದ ಪೈಪೋಟಿಯಲ್ಲಿ ನಡೆದ ಜಗದಾಳ ಗ್ರಾಮದ ಪಿಕೆಪಿಎಸ್ ಚುನಾವಣೆಯಲ್ಲಿನ 12 ಅಭ್ಯರ್ಥಿಗಳ ಪೈಕಿ 11 ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತ ಉಳ್ಳಾಗಡ್ಡಿ ಬಣದ ಸದಸ್ಯರು ಗೆಲುವು ಸಾಧಿಸಿದರೆ, ಕಾಂಗ್ರೆಸ್ ಬೆಂಬಲಿತ ಅಸ್ಕಿ ಬಣದ ಓರ್ವ ಸದಸ್ಯರು ಮಾತ್ರ ಗೆಲುವು ಸಾಧಿಸಿದ್ದು , ಮತ್ತೊಮ್ಮೆ ಉಳ್ಳಾಗಡ್ಡಿ ಬಣ ಪಿಕೆಪಿಎಸ್ ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಭಾರೀ ಕುತೂಹಲ ಮೂಡಿಸಿದ್ದ ಸೊಸೈಟಿಯ ಚುನಾವಣೆಯು ಕಳೆದೊಂದು ವಾರದಿಂದ ಇಡೀ ಗ್ರಾಮದಲ್ಲಿ ಪ್ರತಿಷ್ಠೆಯ ಚುನಾವಣೆಯಾಗಿ ಭರ್ಜರಿ ಪ್ರಚಾರದಲ್ಲಿ ಅಭ್ಯರ್ಥಿಗಳು ತೊಡಗಿದ್ದರು.



ಬಸವರಾಜ ನೀಲಕಂತ, ಸುಭಾಷ ಉಳ್ಳಾಗಡ್ಡಿ , ಬಾಳಪ್ಪ ದಡ್ಡಿಮನಿ, ಭೀಮಪ್ಪ ಹೊಸೂರ, ಕೃಷ್ಣಪ್ಪ ಉಪ್ಪಾರ, ಶ್ರೀಶೈಲ ಬಿರಾದಾರ ಪಾಟೀಲ, ಗಂಗಪ್ಪ ಉಳ್ಳಾಗಡ್ಡಿ , ಕಾಶವ್ವ ಚನಮಲ್ಲಪ್ಪ ಬಂಗಿ, ವೆಂಕವ್ವ ಶಿವಪ್ಪ ಚಿಂಚಲಿ, ಭೀಮಪ್ಪ ವಾಲಿಕಾರ, ಈರಪ್ಪ ಮರೇಗುದ್ದಿ ಗೆಲುವು ಸಾಧಿಸಿದ್ದಾರೆ. ಐದೂ ಕಡೆ ಬಿಜೆಪಿ ಬೆಂಬಲಿತರ ವಶವಾದ ಪಿಕೆಪಿಎಸ್: ಪಿಕೆಪಿಎಸ್ಗೆ ಕಳೆದ ದಿ.10 ರಂದು ರಬಕವಿ-ಬನಹಟ್ಟಿ ತಾಲೂಕಿನ ಢವಳೇಶ್ವರದಲ್ಲಿ 10 ಜನ ಬಿಜೆಪಿ ಬೆಂಬಲಿತ ಸದಸ್ಯರು, 2 ಕಾಂಗ್ರೆಸ್ ಬೆಂಬಲಿತರು, ಸಸಾಲಟ್ಟಿಯಲ್ಲಿ 10 ಬಿಜೆಪಿ ಹಾಗು ಓವ9 ಕಾಂಗ್ರೆಸ್ ಬೆಂಬಲಿತ ಹಾಗು ಜಗದಾಳ ಗ್ರಾಮದಲ್ಲಿ 11 ಬಿಜೆಪಿ ಹಾಗು ಓರ್ವ ಕಾಂಗ್ರೆಸ್ ಬೆಂಬಲಿತ ಸದಸ್ಯರು ಆಯ್ಕೆಯಾಗುವ ಮೂಲಕ ಬಿಜೆಪಿ ಬೆಂಬಲಿತರು ಮೇಲುಗೈ ಸಾಧಿಸಿದ್ದಾರೆ. ಅದರಂತೆ ತೇರದಾಳ ಹಾಗು ಮಹಾಲಿಂಗಪೂರ ಪಟ್ಟಣದ ಪಿಕೆಪಿಎಸ್ನಲ್ಲಿ ಬಿಜೆಪಿ ಬೆಂಬಲಿತ ಸದಸ್ಯರಿಂದಲೇ ಅವಿರೋಧವಾಗಿ ಸದಸ್ಯರು ಆಯ್ಕೆಯಾಗುವ ಮೂಲಕ ದಿ.10 ರಂದು ನಡೆದ 5 ಸೊಸೈಟಿಗಳ ಚುನಾವಣೆಗಳೆಲ್ಲವೂ ಬಿಜೆಪಿ ಬೆಂಬಲಿತರ ತೆಕ್ಕೆಗೆ ಬಿದ್ದಿರುವದು ವಿಶೇಷ.

# ಬಾವನ ಸೌಂದತ್ತಿ: ಹಗಲುಗನಸಾಗಿ ಉಳಿದ ಕುಡಿಯುವ ನೀರಿನ ಕಾಮಗಾರಿ ಸ್ಥಗಿತ



ರಾಯಬಾಗ : ತಾಲೂಕಿನ ದಕ್ಷಿಣ ಭಾಗದ ಹಳ್ಳಿಗಳಿಗೆ ಕುಡಿಯುವ ನೀರಿಗಾಗಿ ಕೆರೆ ತುಂಬುವ ಯೋಜನೆಗೆ ಚಾಲನೆ ನೀಡಿ ದಶಕವೇ ಸಮೀಪಿಸುತ್ತಿದ್ದರೂ ಕಾಮಗಾರಿ ಮಾತ್ರ ಪೂರ್ಣಗೊಳ್ಳದೇ ಬಹಳ ವರ್ಷಗಳಿಂದ ಜನರ ಬೇಡಿಕೆಯಾಗಿದ್ದ ಶಾಶ್ವತ ಕುಡಿಯುವ ನೀರಿನ ಯೋಜನೆ ಮಾತ್ರ ಜನರ ಪಾಲಿಗೆ ಹಗಲು ಕನಸಾಗಿ ಉಳಿದಿದೆ.

ಬೆಂಡವಾಡ, ಬೂದಿಹಾಳ, ನಂದಿಕುರಳಿ, ಮೇಖಳಿ, ಯಡ್ರಾವ, ಹುಬ್ಬರವಾಡಿ, ರಾಯಬಾಗ ಗ್ರಾಮೀಣ, ಹುಲ್ಯಾಳ ಕೆರೆ ಸೇರಿದಂತೆ ಸುಮಾರು 39 ಕೆರೆಗಳನ್ನು ತುಂಬುವ ಬ್ರಹತ್ ಯೋಜನೆ ಇದಾಗಿತ್ತು. ಇದರಿಂದ ಇಲ್ಲಿನ ಜನರಿಗೆ, ದನಕರಗಳಿಗೆ ಕುಡಿಯುವ ನೀರಿಗೆ ಶಾಶ್ವತ ಪರಿಹಾರ ಸಿಗುವುದು ಅಷ್ಟೆ ಅಲ್ಲ ನೀರಿನ ಅಂತರ ಜಲಮಟ್ಟ ಸುಧಾರಿಸಿ ಬಾವಿ, ಬೋರವೆಲ್ ಗಳಿಗೆ ನೀರು ಬರುವ ಆಸೆ ಜನರದ್ದಾಗಿತ್ತು. ಅದು ಕನಸಾಗಿ ಉಳಿದಿದೆ.

ಅಂದಿನ ಕಾಂಗ್ರೆಸ್ ಸರ್ಕಾರ ಇದ್ದಾಗ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಕಾಮಗಾರಿಗೆ 2018 ರಲ್ಲಿ ಚಾಲನೆ ನೀಡಿದ್ದರು. ಕಾಮಗಾರಿಗೆ ಸುಮಾರು ಒಂದು ನೂರು ಕೋಟಿ ರೂ ಅನುದಾನ ಮಂಜೂರ ಮಾಡಿ, ಎರಡು ವರ್ಷದಲ್ಲಿ ಕಾಮಗಾರಿ ಮುಗಿಸುವಂತೆ ಬೃಹತ್ ವೇದಿಕೆಯಲ್ಲಿ ಬಾಷಣ ಮಾಡಿ ಜನರಿಂದ ಶಬಾಷ್ ಎನಿಸಿಕೊಂಡಿದ್ದರು. ಆದರೆ ಅವರೆ ಎರಡನೇ ಬಾರಿಗೆ ಮುಖ್ಯ ಮಂತ್ರಿಯಾಗಿ ವರ್ಷ ಕಳೆಯುತ್ತ ಬಂದರೂ ಕಾಮಗಾರಿ ಮಾತ್ರ ಅರ್ಧಕ್ಕೆ ನಿಂತಿರುವುದು ಒಂದು ವಿಪರ್ಯಾಸ.

ರಾಯಬಾಗ ತಾಲೂಕಿನ ದಕ್ಷಿಣ ಭಾಗವು ಒಣ ಭೂಮಿಯಾಗಿದೆ. ಇಲ್ಲಿ ನೀರಾವರಿ ಸೌಲಭ್ಯಗಳಿಲ್ಲ. ಇಲ್ಲಿನ ಬೇಸಾಯ ಮಾತ್ರ ಮಳೆ ಆಶ್ರಿತವಾಗಿದೆ. ಕಾರಣ ಪ್ರತಿ ವರ್ಷವೂ ಕುಡಿಯುವ ನೀರಿಗಾಗಿ ಹಾಹಾಕಾರವಿರುವ ಗ್ರಾಮಗಳ ಸಂಖ್ಯೆ ಹೆಚ್ಚಾಗಿದೆ. ನೀರಿನ ಭೀಕರತೆ ಎಷ್ಟೆಂದರೆ ಮಳೆಗಾಲದಲ್ಲಿಯೂ ಟ್ಯಾಂಕರ ಮೂಲಕ ನೀರು ಸರಬರಾಜು ಮಾಡಿದ ಉದಾಹರಣೆಯಿದೆ. ಆದ್ದರಿಂದ ಮಳೆಗಾಲದಲ್ಲಿ ಕೃಷ್ಣಾ ನದಿಯಿಂದ ಹರಿದು ಹೋಗುವ ನೀರನ್ನು ಪಾಯಿಪ್ ಲಾಯಿನ್ ಮೂಲಕ ಕೆರೆಗಳನ್ನು ತುಂಬಿಸಿ ಕುಡಿಯುವ ನೀರಿಗೆ ಶಾಶ್ವತ ಪರಿಹಾರ ಕಲ್ಪಿಸುವುದು ಯೋಜನೆಯ ರೂಪರೇಷೆಯಾಗಿತ್ತು.

ಇಲ್ಲಿನ ಹಳ್ಳಿಗಾಡಿನ ಜನರು ಉದ್ಯೋಗ ಅರಸಿ ಪಕ್ಕದ ಮಹಾರಾಷ್ಟ್ರಕ್ಕೆ ಹೋಗುವುದು ಸರ್ವೆಸಾಮಾನ್ಯ. ಇಲ್ಲಿನ ಜನರಿಗೆ ಬೇಸಾಯಕ್ಕೆ ಅಲ್ಲ , ಕುಡಿಯುವ ನೀರಿಗಾದರೂ ಶಾಶ್ವತ ಪರಿಹಾರ ಕಲ್ಪಿಸಿ ಎಂದು ಜನರ ಬೇಡಿಕೆಯಾಗಿತ್ತು. ಜನತೆಯ ಕೂಗು ಕೂಗಾಗಿಯೇ ಉಳಿದಿದೆ. ಪ್ರತಿ ಚುನಾವಣೆ ಬಂದಾಗ ರಾಜಕಾಣಿಗಳು ಇಲ್ಲಿನ ಜನರಿಗೆ ಇದೇ ಭರವಸೆ ನೀಡಿ ಹೋಗುತ್ತಾರೆ. ಇಂದಿಲ್ಲಾ ನಾಳೆಯಾದರೂ ಪರಿಹಾರ ಸಿಗಬಹುದೆಂಬ ಆಸೆಯಿಂದ ಹಲವಾರು ಬಾರಿ ತಮ್ಮ ಮತಗಳನ್ನು ಹಾಳು ಮಾಡಿಕೊಂಡಿದ್ದಾರೆ. ಆದರೆ ಜನರ ಆಸೆ ಮಾತ್ರ ಕನ್ನಡಿಯೊಳಗಿನ ಗಂಟಾಗಿಯೇ ಉಳಿದಿದೆ. ಕೆರೆ ತುಂಬಿಸಿ ಕುಡಿಯುವ ನೀರಿನ ದಾಹ ತೀರಿಸಿ ಎಂದು ಜನರ ಬಲವಾದ ಕೂಗಿಗೆ ಕೊನೆ ಯಾವಾಗ ಎಂಬುದು ಮಾತ್ರ ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ.

ವರದಿ : ಡಾ. ಜಯವೀರ ಎ.ಕೆ.

**ಮೆಟೀರಿಯಲ್ ಕಳ್ಳತನ:**

ಕಾಮಗಾರಿ ಬಹಳ ದಿನಗಳಿಂದ ಬಂದ್ ಆಗಿದ್ದರಿಂದ ಕಿಡಿಗೇಡಿಗಳು ಎಂಸ್ಯಾಂಡ್, ಖಿಡಿ ಸ್ಟೀಲ್, ಸಿಮೆಂಟ ಕಳ್ಳತನ ಮಾಡಿಕೊಂಡು ಹೋಗಿದ್ದಾರೆ. ಸಂಬಂಧಪಟ್ಟವರೂ ಸಹಿತ ಈ ಬಗ್ಗೆ ಕಾಳಜಿ ಮಾಡಿಲ್ಲ.

- - - - - - - - - -

ಜಮೀನು ಒತ್ತುವರಿ ಮಾಡಿಕೊಂಡ ರೈತರ ಹಣ ನೀಡಬೇಕಾದರೆ ಖಾತೆಗಳು ಸರಿಯಾಗಿ ಇಲ್ಲದಿರುವುದರಿಂದ ಹಣ ಜಮೆ ಆಗಿಲ್ಲ. ಅವರ ಹಣ ಇಲಾಖೆಯಲ್ಲಿ ಇದೆ. ಉತಾರ ಸರಿಯಾದ ಮೇಲೆ ಜಮೆ ಮಾಡಲಾಗುವುದು. ಬರುವ ಜೂನ್ ತಿಂಗಳಲ್ಲಿ ನೀರು ಆರಂಭಿಸುವ ಗುರಿ ಇದೆ.

**–ಎಸ್. ಎಸ್. ಕರಿಗಾರ ಎಕ್ಸಿಕ್ಯೂಟಿವ್ ಇಂಜನೀಯರ ಚಿಕ್ಕೋಡಿ.**

- - - - - - - - - -

ಯೋಜನೆ ಬಹಳ ಉಪಯುಕ್ತವಾದದ್ದು, ಬರಗಾಲದಿಂದ ಜನರು ತತ್ತರು ಗೊಂಡಿದ್ದಾರೆ. ಹಾಗಾಗಿ ನೀರು ಬಂದರೆ ಬಹಳ ಅನುಕೂಲವಾಗುತ್ತದೆ. ಬೇಸಿಗೆಯಲ್ಲಿ ಕುಡಿಯುವ, ದನಕರುಗಳಿಗೆ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು.

**–ಅಮೀತ ಜಾಧವ, ಗ್ರಾಪಂ ಉಪಾಧ್ಯಕ್ಷರು ನಂದಿಕುರಳಿ.**

# ದಶಕ ಕಳೆದರೂ ಉದ್ಘಾಟನೆಯಾಗದ ದಿಗ್ಗೇವಾಡಿ ಪಶು ಚಿಕಿತ್ಸಾಲಯ



ರಾಯಬಾಗ : ತಾಲೂಕಿನ ದಿಗ್ಗೇವಾಡಿ ಗ್ರಾಮದಲ್ಲಿ ಪಶು ಚಿಕಿತ್ಸಾಲಯ ನಿರ್ಮಾಣವಾಗಿ ದಶಕ ಕಳೆದರೂ ಉದ್ಘಾಟನೆಗೆ ಕಾಯುತ್ತಿರುವುದು ಜನರ ಪಾಲಿಗೆ ದೇವರ ಕೊಟ್ಟರೂ ಪೂಜಾರಿ ಅಪ್ಪಣೆ ಬೇಕೆಂಬಂತಾಗಿದೆ.

ದಿಗ್ಗೇವಾಡಿಯಲ್ಲಿ ಜೀವನೋಪಾಯದ ಕಸಬಾಗಿ ಹೈನುಗಾರಿಕೆ ಮಾಡುತ್ತಾರೆ. ಪ್ರತಿ ಮನೆಗೆ ಕನಿಷ್ಠ ಎರಡರಿಂದ ಸುಮಾರು ಹತ್ತು ಎಮ್ಮೆಗಳನ್ನು ಜೊತೆಗೆ ಆಕಳುಗಳನ್ನು ಸಾಕುವುದರ ಮೂಲಕ ಈ ಗ್ರಾಮವು ಹೈನುಗಾರಿಕೆಗೆ ಪ್ರಸಿದ್ಧಿ ಪಡೆದಿದೆ. ಹೀಗಿರುವಾಗ ಈ ಗ್ರಾಮದಲ್ಲಿ ಒಂದು ಪಶು ಚಿಕಿತ್ಸಾಲಯ ಬೇಕೆಂದು ಜನರ ಬಹುದಿನದ ಬೇಡಿಕೆಯಾಗಿತ್ತು.

ಜನರ ನಿರೀಕ್ಷೆಯಂತೆ ದಶಕದ ಹಿಂದೆ ಪಶು ಪಾಲನೆ ಮತ್ತು ಪಶುವೈದ್ಯಕಿಯ ಸೇವಾ ಇಲಾಖೆಯಿಂದ ಗ್ರಾಮಕ್ಕೆ ಒಂದು ಪಶು ಚಿಕಿತ್ಸಾಲಯ ಮಂಜೂರಾಯಿತು. ಆದರೆ ಕಟ್ಟಡ ನಿರ್ಮಾಣಕ್ಕೆ ಸ್ಥಳ ಇಲ್ಲದ್ದರಿಂದ ಕಟ್ಟಡಕ್ಕೆ ವಿಳಂಭವಾಯಿತು. ಕೊನೆಗೆ ಮಂಜೂರಾತಿ ರದ್ದಾಗುವ ಹಂತ ತಲುಪಿದಾಗ ಆಗಿನ ಗ್ರಾಮ ಪಂಚಾಯತ ಆಡಳಿತ ಮಂಡಳಿಯವರು ಗ್ರಾಮದಲ್ಲಿ ದೇಣಿಗೆ ಸಂಗ್ರಹ ಮಾಡಿದರು. ಹಲವಾರು ಮುಖಂಡರ ನೇತೃತ್ವದಲ್ಲಿ, ಗ್ರಾಮ ಪಂಚಾಯತ ಸದಸ್ಯರ ಒಂದು ವರ್ಷದ ಬತ್ತಾ ಹಾಗೂ ಗ್ರಾಮಸ್ಥರಿಂದ ದೇಣಗಿ ಸಂಗ್ರಹ ಮಾಡಿ ಸುಮಾರಿ 3 ಗುಂಟೆ ಜಾಗ ಖರೀದಿಸಿ ಕಟ್ಟಡಕ್ಕೆ ಮುಂದಾದರು. ಸುಮಾರು ಎರಡು ವರ್ಷದಲ್ಲಿ ಕಟ್ಟಡವೂ ನಿರ್ಮಾಣವಾಯಿತು. ಆದರೆ ಉದ್ಘಾಟನೆಗೆ ಮಾತ್ರ ದಶಕ ಪೂರೈಸುತ್ತಿರುವುದು ಒಂದು ವಿಪರ್ಯಾಸವಾಗಿದೆ.

ದಿಗ್ಗೇವಾಡಿ ಗ್ರಾಮದಲ್ಲಿ ಪಶುಪಾಲನೆ, ಪಶುವೈದ್ಯಕೀಯ ಸೇವಾಸಂಸ್ಥೆಯಿಂದ ಐಆರ್ ಡಿಎಫ್ 20ನೇ ಯೋಜನೆಯಡಿ 36.60ಲಕ್ಷ ರೂ ಅನುದಾನದಲ್ಲಿ ಕ್ಷೇತ್ರದ ಶಾಸಕ ದುರ್ಯೋಧನ ಐಹೊಳೆ ಅವರು ಕಾಮಗಾರಿಗೆ ಚಾಲನೆ ನೀಡಿದ್ದರು. ಲ್ಯಾಂಡ ಆರ್ಮಿಯಿಂದ ಕಾಮಗಾರಿ ಮುಗಿದು ಮೂರು ವರ್ಷಗಳಾಗಿದ್ದು ಉದ್ಘಾಟನೆಯಾಗಿಲ್ಲ.

ಈ ಚಿಕಿತ್ಸಾಲಯ ಲೋಕಾರ್ಪಣೆಯಾದರೆ ಸಮೀಪದ ಜಲಾಲಪೂರ, ಹಳೆದಿಗ್ಗೇವಾಡಿ, ಬಾವನ ಸೌಂದತ್ತಿ ಸೇರಿದಂತೆ ಹಲವು ಗ್ರಾಮಗಳ ರೈತರಿಗೆ ಅನುಕೂಲವಾಗಲಿದೆ. ಜಾನುವಾರಗಳಿಗೆ ಸಾಂಕ್ರಾಮಿಕ ರೋಗಗಳ ಕಾಲದಲ್ಲಿ ರೈತರು ಕಂಗಾಲಾಗಿ ಹೋಗುತ್ತಾರೆ. ಇಲ್ಲಿ ವೈದ್ಯರ ಸೇವೆ ಲಭ್ಯವಿದ್ದರೂ ಸರಕಾರಿ ನೀರಾವರಿ ಇಲಾಖೆಯ ಹಳೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಿಬೇಕಾಗಿದೆ. ರೈತರ ಇಚ್ಛಾಶಕ್ತಿ ಹಾಗೂ ಪ್ರಯತ್ನದ ಫಲವಾಗಿ ಚಿಕಿತ್ಸಾಲಯ ನಿರ್ಮಾಣವಾಗಿದ್ದರೂ ಉದ್ಘಾಟನೆಯಾಗದೆ ರೈತರ ಪಾಲಿಗೆ ಇದ್ದು ಇಲ್ಲದಂತಾಗಿದೆ.

ರಾಜಕೀಯ ಇಚ್ಛಾಶಕ್ತಿಯ ಕೊರತೆ :

ಅಂದು ಶ್ರಮವಹಿಸಿ ಕಟ್ಟಡ ನಿರ್ಮಾಣ ಮಾಡಲು ಮುಂದಾದ ರಾಜಕೀಯ ಪಕ್ಷ ಗ್ರಾಮದಲ್ಲಿ ಆಡಳಿತ ಕಳೆದುಕೊಂಡಿತು. ನಂತರ ಬಂದ ರಾಜಕೀಯ ಮುಖಂಡರು ಇತ್ತ ಕಣ್ಣೆತ್ತಿಯೂ ನೋಡಲಿಲ್ಲ. ಆದರೆ ಈಗ ಮತ್ತೆ ಅದೇ ಅಂದಿನ ರಾಜಕೀಯ ಮುಖಂಡರು ಗ್ರಾಮದ ಆಡಲಿತ ನಿರ್ವಹಣೆ ಮಾಡುತ್ತಿದ್ದಾರೆ. ಆದ್ದರಿಂದ ಈಗಲಾದರೂ ಪಶು ಚಿಕಿತ್ಸಾಲಯ ಉದ್ಘಾಟನೆ ಮಾಡಿ ಜನರಿಗೆ ನೆರವಾಗಬೇಕೆಂಬುದೇ ಇಲ್ಲಿನ ಸಾರ್ವಜನಿಕರ ಹಿರಿದಾದ ಆಸೆಯಾಗಿದೆ.

ವರದಿ : ಡಾ. ಜಯವೀರ ಎ.ಕೆ. ಖೇಮಲಾಪುರ

"ರೈತರಿಗೆ ಅನುಕೂಲವಾಗಲೆಂದು ಪಶು ಆಸ್ಪತ್ರೆ ಕಟ್ಟಿದ್ದಾರೆ. ಪ್ರಯೋಜನಕ್ಕೆ ಬಾರದಂತಾಗಿದೆ. ಹಳೆಯ ಕಟ್ಟಡದಲ್ಲಿ ಯಾವುದೇ ಔಷಧಿಗಳು ಇಲ್ಲ. ರೈತರು ಎಲ್ಲಿ ಹೋಗಬೇಕು.? ತಕ್ಷಣ ಉದ್ಘಾಟಿಸಿ ರೈತರಿಗೆ ಅನುಕೂಲ ಮಾಡಬೇಕಿದೆ.

**–ಧರೆಪ್ಪ ಮಿರ್ಜೆ, ಸಂಸ್ಥಾಪಕರು, ಶ್ರೀ ಮಹಾಲಿಂಗೇಶ್ವರ ಕ್ರೆಡಿಟ್ ಸೌಹಾರ್ದ ದಿಗ್ಗೇವಾಡಿ**

- - - - - - - - - -

"ಪಶು ಆಸ್ಪತ್ರೆ ಕಾಮಗಾರಿ ಪೂರ್ಣಗೊಂಡಿದ್ದು ಅಧಿವೇಶನ ಮುಗಿದ ನಂತರ ಉದ್ಘಾಟನೆಯಾಗಲಿದೆ. ಇದರಿಂದ ರೈತರಿಗೆ ಅನುಕೂಲವಾಗಲಿದೆ."

***ಡಾ.ಸಚಿನ್ ಸೌಂದಲಗಿ, ಸಹಾಯಕ ನಿರ್ದೇಶಕರು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ರಾಯಬಾಗ.**

- - - - - - - - - -

"ಪಶು ಆಸ್ಪತ್ರೆ ಕೆಲ ಕಾಮಗಾರಿಗಳು ಉಳಿದಿದ್ದು ಅವುಗಳನ್ನು ಪೂರ್ಣಗೊಳಿಸಲಾಗಿದೆ. ಹಾಗಾಗಿ ಶೀಘ್ರದಲ್ಲಿ ಉದ್ಘಾಟಿಸಲಾಗುವುದು.

**–ರವೀಂದ್ರ ಚೌಗುಲೆ, ಗ್ರಾಪಂ ಅಧ್ಯಕ್ಷರು, ದಿಗ್ಗೇವಾಡಿ**

- - - - - - - - - -

"ಗ್ರಾಮದಲ್ಲಿ ಜಾನುವಾರುಗಳು ಬಹಳ ಆಗಿದ್ದು, ಸರಿಯಾಗಿ ಆಸ್ಪತ್ರೆ ವ್ಯವಸ್ಥೆ ಇರಲಿಲ್ಲ. ಹಾಗಾಗಿ ಹಿರಿಯರ ಸಮ್ಮುಖದಲ್ಲಿ ದೇಣಿಗೆ ಸಂಘ್ರಹಿಸಿ ಸ್ಥಳ ಖರೀದಿಸಿ ನಂತರ ಆಸ್ಪತ್ರೆ ಕಾಮಗಾರಿ ಮುಗಿದು ಮೂರು ವರ್ಷವಾದರೂ ಉದ್ಘಾಟನೆಯಾಗಿಲ್ಲ. ಪಕ್ಷ ಬೇಧ ಮರೆತು ಉದ್ಘಾಟನೆ ಮಾಡಬೇಕಿದೆ."

**–ಸಿದ್ದಾರೂಢ ಬಂಡಗರ, ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ರಾಯಬಾಗ.**

# ಸಹಕಾರಿ ಸಂಘಗಳಲ್ಲಿನ ಅವ್ಯವಹಾರಕ್ಕೆ ಕಡಿವಾಣ: ಕೆ.ಎನ್.ರಾಜಣ್ಣ

ಬೆಳಗಾವಿ ಸುವರ್ಣವಿಧಾನಸೌಧ : ಸಹಕಾರಿ ಲೆಕ್ಕ ಪರಿಶೋಧನಾ ಇಲಾಖೆಯಿಂದ ಸರ್ಕಾರಕ್ಕೆ ನಿರೀಕ್ಷಿತ ಆದಾಯ ಬರುವಂತೆ ಆಮೂಲಾಗ್ರ ಬದಲಾವಣೆ ತರಲು ಚಿಂತನೆ ನಡೆದಿದೆ ಎಂದು ಸಹಕಾರ ಸಚಿವರಾದ ಕೆ.ಎನ್.ರಾಜಣ್ಣ ಅವರು ಹೇಳಿದರು.

ರಾಜ್ಯದಲ್ಲಿ 1679 ಸಹಕಾರ ಸಂಘಗಳಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಮಾಹಿತಿ ಇದೆ. ಸಹಕಾರಿ ಸಂಘಗಳ ಸ್ಥಿತಿಗತಿಯನ್ನು ಗಮನಿಸಿ ಸರ್ಕಾರವು ಯಾವ ರೀತಿಯ ಸುಧಾರಣಾ ವ್ಯವಸ್ಥೆ ರೂಪಿಸಿದೆ ಎನ್ನುವ ವಿಧಾನ ಪರಿಷತ್ತಿನ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಸಹಕಾರಿ ಕ್ಷೇತ್ರದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಎಲ್ಲಾ ರೀತಿಯ ಪ್ರಯತ್ನ ಮಾಡಲಾಗುತ್ತಿದೆ. ಇತ್ತೀಚಿಗೆ ಹಿರಿಯ ಸಹಕಾರಿಗಳೊಂದಿಗೆ ಸಭೆ ನಡೆಸಿ ಸಲಹೆ ಪಡೆಯಲಾಗಿದೆ. ಸಹಕಾರಿ ಸಂಘಗಳಲ್ಲಿನ ಹಣ ದುರುಪಯೋಗ, ಅವ್ಯವಹಾರಕ್ಕೆ ಕಡಿವಾಣ ಹಾಕಲಾಗುವುದು. ಸಹಕಾರಿಗಳು ಮೆಚ್ಚದ ಕೃತ್ಯಗಳಿಗೆ ಕಡಿವಾಣ ಹಾಕಲಾಗುವುದು ಎಂದು ಸಚಿವರು ತಿಳಿಸಿದರು.

ಸಹಕಾರಿ ಲೆಕ್ಕ ಪರಿಶೋಧನಾ ಇಲಾಖೆಯನ್ನು ಬಲಪಡಿಸಲು ನಾನಾ ಯೋಜನೆಗಳನ್ನು ರೂಪಿಸಲಾಗಿದೆ. 390 ಲೆಕ್ಕ ಪರಿಶೋಧಕರ ನೇಮಕಾತಿಗೆ ಪ್ರಸ್ತಾವನೆಯಿದ್ದು ಪರಿಶೀಲನಾ ಹಂತದಲ್ಲಿದೆ. 20 ಜನ ಲೆಕ್ಕ ಪರಿಶೋಧಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಅನುಕಂಪದ ಆಧಾರದ ಮೇಲೆ ವಿವಿಧ 55 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

# ಮಕ್ಕಳನ್ನು ಪಠೇತರ ಚಟವಟಿಕೆಗಳಿಗೆ ಬಿಡಿ: ತಹಶೀಲ್ದಾರ ಮಹಾದೇವ ಸನಮುರಿ



ಮೂಡಲಗಿ : ಈ ಕಾಲದ ಆಧುನಿಕ ತಾಯಂದಿರು ತಮ್ಮ ಮಕ್ಕಳನ್ನು ಪಠೇತರ ಚಟವಟಿಕೆಗಳಿಗೆ ಬಿಡುತ್ತಿಲ್ಲ ಎಂದು ಮೂಡಲಗಿ ತಹಶೀಲ್ದಾರ ಮಹಾದೇವ ಸನಮುರಿ ವಿಷಾದಿಸಿದರು

ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಆಶ್ರಯದಲ್ಲಿ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಏಕವಲಯ ಅಂತರ ಕಾಲೇಜು ಪುರುಷರ ಖೋ ಖೋ ಪಂದ್ಯಾವಳಿ ಹಾಗೂ ವಿಶ್ವವಿದ್ಯಾಲಯ ತಂಡದ ಆಯ್ಕೆಯ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು,

ಮಕ್ಕಳಿಗೆ ಪಂಚ ಮಹಾಭೂತಗಳ ಸ್ಪರ್ಶ ಆಗುವದರಿಂದ ಮಾನಸಿಕ ಹಾಗೂ ದೈಹಿಕ ಬೆಳವಣಿಗೆ ಸಾಧ್ಯ ಕಾರಣ ಪಾಲಕರ ಮಕ್ಕಳನ್ನು ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳಲು ಪ್ರೇರೇಪಿಸಬೇಕೆಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿ ರಾಷ್ಟ್ರೀಯ ಪುರಸ್ಕಾರ ವಿಜೇತ ಮೂಡಲಗಿ ಕ್ಷೇತ್ರ ಶಿಕ್ಷಣಾಧಿಕಾರಿ ಅಜೀತ ಮನ್ನಿಕೇರಿ ಮಾತನಾಡಿ, ವೈಯಕ್ತಿಕ ಬದುಕಿನ ಬೆಳವಣಿಗೆಗೆ ಅವಕಾಶಗಳು ಸಿಗುವದು ಶಾಲಾ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಶಾಲಾ ದಿನಗಳಲ್ಲಿ ಸಣ್ಣ ಸಣ್ಣ ಪ್ರಯತ್ನಗಳನು ಮಾಡುವ ಮೂಲಕ ಬದುಕಿನ ದೊಡ್ಡ ದೊಡ್ಡ ಯಶಸ್ವಿಗೆ ಬುನಾದಿ ಹಾಕಿಕೊಳ್ಳ ಬೇಕು, ನಾನು ಕೂಡ ಆ ದಾರಿಯಲ್ಲಿ ಸಾಗಿ ಬಂದು ನಿಮ್ಮ ಮುಂದೆ ನಿಂತಿದ್ದೇನೆ ಎಂದು ವಿದ್ಯಾರ್ಥಿಗಳಿಗೆ ಪ್ರೇರೇಪಿಸಿದರು

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೂಡಲಗಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಿಜಯಕುಮಾರ ಸೋನವಾಲ್ಕರ ಅವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಈ ಸಮಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿ ರಾಷ್ಟ್ರೀಯ ಪುರಸ್ಕಾರ ಪಡೆದ ಕ್ಷೇತ್ರ ಶಿಕ್ಷಣಾಧಿಕಾರಿ ಅಜಿತ ಮನ್ನಿಕೇರಿ ಹಾಗೂ ನೂತನ ಮೂಡಲಗಿ ತಹಶೀಲ್ದಾರ ಮಹಾದೇವ ಸನಮುರಿ ಅವರನು ಸತ್ಕರಿಸಿ ಗೌರವಿಸಿದರು.

ವೇದಿಕೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಖೋ ಖೋ ತಂಡದ ಆಯ್ಕೆ ಸಮಿತಿಯ ಸದಸ್ಯರಾದ ಎಚ್.ಎನ್. ಲೋಕೇಶ, ಎನ್.ಕೆ.ಕುರಿ, ಮೂಡಲಗಿ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ರವೀಂದ್ರ ಸೋನವಾಲಕರ, ವೆಂಕಟೇಶ ಸೋನವಾಲಕರ, ಅನೀಲ ಸತರಡ್ಡಿ, ಪ್ರಾಚಾರ್ಯ ಪ್ರೊ ಸಂಗಮೇಶ ಗುಜಗೊಂಡ, ಡಾ.ಎಂ.ಕೆ.ಕಂಕಣವಾಡಿ,ಪ್ರೊ.ಎಸ್.ಬಿ.ಖೋತ, ಪ್ರೊ.ವಿ.ಎಸ್.ಕುಂಬಾರ. ಡಾ.ಎಸ್.ಎಲ್.ಚಿತ್ರಗಾರ, ಪ್ರೊ.ಜಿ.ವಿ.ನಾಗರಾಜ, ಪ್ರೊ. ಎಸ್.ಸಿ.ಮಂಟೂರ, ಪ್ರೊ. ಎ. ಎಸ್. ಮೀಸಿನಾಯಿಕ, ಭೀಮಶಿ ಬಡಗನ್ನವರ ಉಪಸ್ಥಿತರಿದ್ದರು.

# ಯುವಕರು ಗರಡಿಮನೆಗಳತ್ತ ಹೆಜ್ಜೆ ಹಾಕಿದ್ರೆ ಕುಸ್ತಿಯ ಗತವೈಭವ ಮತ್ತೆ ಮರುಕಳಿಸುತ್ತೆ: ಸಂಸದ ಈರಣ್ಣ ಕಡಾಡಿ




ಮೂಡಲಗಿ : ಯಾಂತ್ರಿಕ ಬದುಕು ಮತ್ತು ಆಧುನಿಕತೆಯ ಅಬ್ಬರದಲ್ಲಿ ವ್ಯಾಯಾಮ ಶಾಲೆ, ಗರಡಿ ಮನೆಗಳು ಅವಸಾನದ ಅಂಚಿಗೆ ತಲುಪಿವೆ. ಅವುಗಳನ್ನು ಮರು ಸ್ಥಾಪಿಸಿ ಯುವಕರನ್ನು ಪ್ರೇರಣೆಗೋಳಿಸುವ ಮೂಲಕ ಪ್ರಾಚೀನ ಭಾರತದ ಕ್ರೀಡೆಗಳಾದ ಕುಸ್ತಿ ಕಬ್ಬಡಿ ಆಟಗಳಿಗೆ ಆದ್ಯತೆ ನೀಡಲಾಗುತ್ತದೆ ಗತಕಾಲದ ವೈಭವ ಮತ್ತೆ ಮರುಕಳಿಸಿದ್ದು ದೇಶಿಯ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಿ ಬೆಳೆಸಬೇಕಾದ ಅಗತ್ಯವಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ಕಲ್ಲೋಳಿ ಪಟ್ಟಣದಲ್ಲಿ ರಾಜ್ಯಸಭಾ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಗರಡಿ ಮನೆ ಕಟ್ಟಡ ಪುನರ್ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಮೊದಲೆಲ್ಲ ಕುಸ್ತಿ ಮಾಡುವುದೆಂದರೆ ಪ್ರತಿಷ್ಠೆಯ ವಿಷಯವಾಗಿತ್ತು. ಗರಡಿ ಮನೆಗಳು ಕಟ್ಟುಮಸ್ತಾದ ದೇಹಾಡ್ಯತೆಗೆ ಯೋಗ್ಯ ಸ್ಥಳಗಳಾಗಿದ್ದವು. ಇದರಿಂದಾಗಿ ಆರೋಗ್ಯ ಉತ್ತಮವಾಗಿರುತ್ತಿತ್ತು. ವಿಪರ್ಯಾಸವೆಂದರೆ ಇಂದಿನ ಮಕ್ಕಳಿಗೆ ಗರಡಿ ಮನೆಗಳ ಮಹತ್ವ ತಿಳಿದಿಲ್ಲ. ಇಂದಿನ ಯುವಕರು ದುಶ್ಚಟಗಳಿಗೆ ಬಲಿಯಾಗಿ, ಮಾನಸಿಕ ಹಾಗೂ ದೈಹಿಕವಾಗಿ ದುರ್ಬಲರಾಗುತ್ತಿದ್ದಾರೆ ಮತ್ತೆ ಅವರನ್ನು ಗರಡಿ ಮನೆಗಳತ್ತ ಸೆಳೆಯುವ ಮೂಲಕ ಕುಸ್ತಿಯ ಗತ ವೈಭವ ಮರುಕಳಿಸಲು ಗ್ರಾಮದ ಹಿರಿಯರು ಸಹಕರಿಸ ಬೇಕಾಗಿ ಕರೆ ನೀಡಿದರು.

ಹಿಂದಿನ ರಾಜ ಮಹಾರಾಜರ ಕಾಲದಲ್ಲಿ ಕುಸ್ತಿಗೆ ಭಾರೀ ಮಹತ್ವವಿತ್ತು ಆದರೆ ಇತ್ತೀಚಿನ ದಿನಗಳಲ್ಲಿ ಜಾತ್ರೆಗಳಲ್ಲಿ ಮಾತ್ರ ನಾವು ಕುಸ್ತಿ ಆಟವನ್ನು ನೋಡುವಂತಾಗಿದೆ. ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ವೈಭವೀಕರಿಸಲು ಕುಸ್ತಿ, ಕಬಡ್ಡಿಯಂತಹ ದೇಶಿ ಆಟಗಳನ್ನು ಪ್ರೋತ್ಸಾಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕಲ್ಲೋಳಿ ಪಟ್ಟಣದಲ್ಲಿ ಗರಡಿ ಮನೆ ಕಟ್ಟಡಕ್ಕೆ ಪುನರ ನಿರ್ಮಾಣ ಕಾರ್ಯಕ್ಕೆ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಅನುದಾನ ನೀಡಲಾಗಿದ್ದು, ಪಟ್ಟಣದ ಯುವಜನತೆ ಗರಡಿ ಮನೆಗಳ ಸದುಯೋಗ ಪಡೆಸಿಕೊಳ್ಳಬೇಕೆಂದು ಕರೆ ನೀಡಿದರು. ಪ್ರಮುಖರಾದ ಬಸವರಾಜ ಕಡಾಡಿ, ಶಂಕರ ಗೋರೋಶಿ, ಪ್ರಭು ಕಡಾಡಿ, ಹಣಮಂತ ಸಂಗಟಿ, ಶ್ರೀಶೈಲ ತುಪ್ಪದ, ಅಡಿವೆಪ್ಪ ಕುರಬೇಟ, ಶಿವಾನಂದ ಹೆಬ್ಬಾಳ, ಗುರುನಾಥ ಮದಭಾಂವಿ, ಪಂಚಣ್ಣ ಹೆಬ್ಬಾಳ, ಅಜೀತ ಚಿಕ್ಕೋಡಿ, ದಸಗೀರ ಕಮತನೂರ, ಸೋಮಲಿಂಗ ಹಡಗಿನಾಳ, ಸಿದ್ದಪ್ಪ ಗದಾಡಿ, ಸೇವಾ ಸಂಸ್ಥೆ ಅಧ್ಯಕ್ಷರಾದ ಪರಪ್ಪ ಗಿರೆಣ್ಣವರ, ಪಟ್ಟಣದ ಪೈಲವಾನರಾದ ಲಕ್ಷ್ಮಣ ಉಮರಾಣಿ, ಹಣಮಂತ ಮೆಚ್ಚನ್ನವರ, ಚಿಂತಾಮಣಿ ಗುದನ್ನವರ, ಬಸವರಾಜ ಕರಡಿಗುದ್ದಿ, ದಸ್ತಗೀರ ತಹಶೀಲ್ದಾರ, ನಾಗಪ್ಪ ಗಾಡಿವಡ್ಡರ, ಗುತ್ತಿಗೆದಾರ ಈರಣ್ಣ ಮುನ್ನೋಳಿಮಠ, ಗೋಕಾಕ ಕೆ.ಆರ್.ಡಿ.ಎಲ್. ಸಂಸ್ಥೆಯ ಸಿಬ್ಬಂದಿ ಮಂಜುನಾಥ ಕಮತೆ ಸೇರಿದಂತೆ ಗರಡಿ ಮನೆ ವಿದ್ಯಾರ್ಥಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

# ಖೊಟ್ಟಿ ದಾಖಲೆ ಸೃಷ್ಟಿಸಿ ನೋಂದಣಿ ಮಾಡುವವರ ಮೇಲೆ ಕಟ್ಟು ನಿಟ್ಟಿನ ಕ್ರಮಕೈಗೊಳ್ಳಿ: ಸಚಿವ ಡಾ. ಎಂ.ಬಿ.ಪಾಟೀಲ ಖಡಕ್ ಸೂಚನೆ



ವಿಜಯಪುರ : ವಿಜಯಪುರ ನಗರ ಸೇರಿದಂತೆ ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಆಸ್ತಿ ನೋಂದಣಿ ಮಾಡುವ ಪ್ರಕರಣಗಳು ಕಂಡು ಬಂದಿದ್ದು ಇಂಥವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಖಾತೆ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಅಧಿಕಾರಿಗಳಿಗೆ ಖಡಕ್ಕಾಗಿ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶನಿವಾರ ಸಭೆ ನಡೆಸಿ ಮಾತನಾಡಿದ ಅವರು, ಕೆಲವರು ಆಧಾರ ಕಾರ್ಡ್ ಮತ್ತು ಪ್ಯಾನ್ ಕಾರ್ಡ್ ಮೂಲಕ ಭೂ ಮಾಲೀಕರ ಹೆಸರಿನಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಆಸ್ತಿ ನೋಂದಣಿ ಮಾಡುತ್ತಿರುವ 13 ಪ್ರಕರಣಗಳನ್ನು ಈಗಾಗಲೇ ದಾಖಲಿಸಲಾಗಿದೆ. ಖೊಟ್ಟಿ ದಾಖಲೆ ಸೃಷ್ಟಿ ಮಾಡಿ, ಆಸ್ತಿಗಳನ್ನು ನೋಂದಣಿ ಮಾಡುವ ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿರು ಬಾಂಡ್ ರೈಟರ್ಸ್ ಗುರತಿಸಿ, ಅವರ ಬಾಂಡ್ ರೈಟರ್ಸ್ ಲೈಸನ್ಸ್ ರದ್ದುಗೊಳಿಸವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಅದರಂತೆ ಸಬ್ ರಜಿಸ್ಟರ್ ಆಫೀಸನಲ್ಲಿ ಉಪ ನೋಂದಣಿ ಕಚೇರಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಹಲವು ದಿನಗಳಿಂದ ಒಂದೇ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವರನ್ನು ಜಿಲ್ಲಾ ವ್ಯಾಪ್ತಿಯಿಂದ ತಾಲೂಕು ಮಟ್ಟದಲ್ಲಿ ವರ್ಗಾವಣೆ ಮಾಡಿ, ತಾಲೂಕು ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಜಿಲ್ಲಾ ವ್ಯಾಪ್ತಿಯಲ್ಲಿ ಕೆಲಸ ಮಾಡಲು ವರ್ಗಾವರ್ಗಿ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಕ್ರಮ ನೋಂದಣಿ ಪ್ರಕರಣಗಳು ಕಂಡು ಬಂದಲ್ಲಿ ಉಪ ನೋಂದಣಾಧಿಕಾರಿಗಳು, ಜಿಲ್ಲಾ ನೋಂದಾಣಾಧಿಕಾರಿಗಳ ಅನುಮತಿ ಪಡೆದು ಸ್ಟೇಟ್ ಎಫ್ಐಆರ್ ಮಾಡಬೇಕು. ನೋಂದಣಿ ಮಾಡುವ ಸಂದರ್ಭದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಬ್ ರಜಿಸ್ಟರ್ ಅವರಿಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ವೋಟರ್ ಐಡಿ ಹಾಗೂ ರೇಶನ್ ಕಾರ್ಡ್ ಕೂಲಂಕೂಷವಾಗಿ ಪರಿಶೀಲಿಸಲು ಲಾಗಿನ್ ಐಡಿ ನೀಡಲಾಗುವುದು. ಮೂಲ ದಾಖಲೆಗಳನ್ನು ಪರಿಶೀಲಿಸಿ ನೋಂದಣಿ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಿದರು.

ನೋಂದಣಿ ಮಾಡುವ ಸಂದರ್ಭದಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳು ದಾಖಲೆಗಳನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ತಮ್ಮ ಹೆಸರು ಹಾಗೂ ಹುದ್ದೆಯನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದರು.

ಜಿಲ್ಲೆಯಾದ್ಯಂತ ಅಕ್ರಮವಾಗಿ ಖೊಟ್ಟಿ ದಾಖಲೆಯನ್ನು ಸೃಷ್ಟಿಸಿ ಮಾರಾಟ ಮಾಡುವುದನ್ನು ತಡೆಗಟ್ಟಲು ತಹಶೀಲ್ದಾರರನ್ನು ನೋಡಲ್ ಅಧಿಕಾರಿಗಳನ್ನಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಂದ ಓರ್ವ ಅಧಿಕಾರಿಯನ್ನು ನೇಮಕ ಮಾಡಿಕೊಳ್ಳಲು ತಿಳಿಸಿದರು. ಇಂತಹ ಪ್ರಕರಣಗಳಲ್ಲಿ ಮೋಸ ಹೋಗಿರುವ ಸಾರ್ವಜನಿಕರು ನೋಡಲ್ ಅಧಿಕಾರಿಗಳಿಗೆ ದೂರು ಸಲ್ಲಿಸಲು ಅನುಕೂಲವಾಗುವಂತೆ ನಿರ್ಣಯ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

ಮಹಾನಗರ ಪಾಲಿಕೆ ಕಚೇರಿಯಲ್ಲಿ ನೊಂದಣಿ ಮಾಡಿಕೊಳ್ಳುವ ಸಂದರ್ಭದಲ್ಲಿ ಅಲ್ಲಿಯೂ ಸಹ ವೋಟರ್ ಐಡಿ ರೇಶನ್ ಕಾರ್ಡ್ ಕಡ್ಡಾಯವಾಗಿ ಪರಿಶೀಲನೆ ಮಾಡಬೇಕು. ಇಂದಿನ ಸಭೆಯ ಸಮಗ್ರವಾದ ನಡಾವಳಿಯ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿ ಮಾರ್ಗದರ್ಶನ ಕೋರಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ತಿಕೋಟಾ, ಬಬಲೇಶ್ವರ, ತಾಳಿಕೋಟೆ ತಾಲೂಕುಗಳಲ್ಲಿ ಸಬ್ ರಜಿಸ್ಟರ್ ಕಚೇರಿಗೆ ಮಂಜೂರಾಗಿದ್ದು, ಈ ಕಚೇರಿಯಲ್ಲಿ ಖಾಲಿ ಹುದ್ದೆಗಳಿಗೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ಸಭೆಯಲ್ಲಿ ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ವಿಜಯಪುರ ಉಪ ವಿಭಾಗಾಧಿಕಾರಿ ಬಸಣೆಪ್ಪ ಕಲಶೆಟ್ಟಿ, ಮಹಾನಗರ ಪಾಲಿಕೆ ಆಯುಕ್ತ ಬದ್ರುದ್ದಿನ್ ಸೌದಾಗರ್, ವಿಜಯಪುರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಾಜಶೇಖರ ಡಂಬಳ, ಜಿಲ್ಲಾ ನೋಂದಣಾಧಿಕಾರಿ ಜಿ.ಆರ್ ನಾಡಗೌಡ, ಉಪ ನೋಂದಣಾಧಿಕಾರಿಗಳಾದ ಬಿ.ಎಸ್. ಬಿರಾದಾರ, ಮಲ್ಲಿಕಾರ್ಜುನ ಪಾಟೀಲ, ರವಿ ಹಂಚಿನಾಳ, ಐ.ಎಸ್.ಬಾಗಾಯತ್, ದೇವಪ್ಪ ಡಂಬಳ ಸೇರಿದಂತೆ ವಿವಿಧ ತಾಲೂಕಿನ ತಹಶೀಲ್ದಾರರು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

